ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 8 ಸಂಚಿಕೆ 48 ನವಂಬರ್ 30, 1986 ಬೆಲೆ 80 ಪೈಸೆ

ಒಳಗೇನಿದೆ?....

ಬೀಡಿ ಕಾರ್ಮಿಕರ ಶೋಷಣೆ ಕೂಡಲೇ ನಿಲ್ಲಲಿ.

— ಸೂರ್ಯನಾರಾಯಣರಾವ್ ಘೋಷಣೆ

ಕರ್ನಾಟಕ ರಾಜ್ಯದಲ್ಲಿ ಮನೆಯನ್ನೇ ಬೀಡಿ ಕಾರ್ಖಾನೆಯನ್ನಾಗಿ ಮಾಡಿ, ಕಾರ್ಮಿಕ–ಮಾಲಕರ ಸಂಬಂಧವನ್ನು ಕಿತ್ತೊಗೆದು ಬೀಡಿ ಕಾರ್ಮಿಕರ ಶೋಷಣೆಗೆ ಮೂಲ ಕಾರಣವಾದ ಕಂಟ್ರಾಕ್ಟ ಪದ್ಧತಿಯನ್ನು ಕೂಡಲೇ ರದ್ದು ಮಾಡಬೇಕೆಂದೂ ಇಲ್ಲವಾದರೆ ಡಿ. 17 ರಂದು ರಾಜ್ಯಾದ್ಯಂತ ತೀವ್ರ ಮುಷ್ಕರ ನಡೆಸಲಾಗುವುದೆಂಬ ಎಚ್ಚರಿಕೆಯನ್ನು ಕರ್ನಾಟಕ ರಾಜ್ಯದ ಐದನೇ ಬೀಡಿ ಸಮ್ಮೇಳನದ, ರಾಜ್ಯ ಬೀಡಿ ಒಕ್ಕೂಟದ ಅಧ್ಯಕ್ಷರಾದ ಹಿರಿಯ ಕಾರ್ಮಿಕ ಮುಖಂಡ ಎಸ್. ಸೂರ್ಯನಾರಾಯಣರಾವ್ ಅವರು ಸಮ್ಮೇಳನದ ಕೊನೆಯದಿನ ನೆಹರೂ ಮೈದಾನದಲ್ಲಿ (ಮಂಗಳೂರು) ನಡೆದ ಬೃಹತ್ ಸಾರ್ವಜನಿಕ ಸಭೆಯಲ್ಲಿ ಗುಡುಗಿದರು. ಹಿಂದಿನ ಕಾಂಗ್ರೆಸ್ ಸರಕಾರ ಹಾಗೆಯೇ ಇಂದಿನ ಜನತಾ ಸರಕಾರ ಬೀಡಿ ಮಾಲಕರ ಪರವಾದ ಧೋರಣೆಯನ್ನನುಸರಿಸಿ ಕಾರ್ಮಿಕರಿಗೆ ಮೋಸ ಮಾಡುತ್ತಿದೆ, ಅವರನ್ನು ಸುಲಿಯುತ್ತಿ ಎಂದು ಆರೋಪಿಸಿದರು.

ಕೇರಳದಲ್ಲಿ ಬೀಡಿ ಕಾರ್ಮಿಕರ ಕಲ್ಯಾಣ ಇಲಾಖೆ ವರ್ಷಕ್ಕೆ ಸುಮಾರು ಒಂದು ಕೋಟಿ ರೂಪಾಯಿ ಖರ್ಚು ಮಾಡುತ್ತಿದೆ. ಆದರೆ ಕರ್ನಾಟಕದ ಜನತಾ ಸರ್ಕಾರ ತಂಬಾಕಿನ ಮೇಲಿನ ಡ್ಯೂಟಿ ಮೂಲಕ ಲಕ್ಷಾವಧಿ ರೂಪಾಯಿ ಶೇಖರಿಸುತ್ತಿದ್ದರೂ ಕಾರ್ಮಿಕರಿಗಾಗಿ ಏನೂ ಖರ್ಚು ಮಾಡುತ್ತಿಲ್ಲ. ಕೇಂದ್ರ ಸರಕಾರದ ಕಲ್ಯಾಣ ಯೋಜನೆಗಳು ಬರೀ ಪುಸ್ತಕದಲ್ಲೇ ಉಳಿದಿಯೆಂದು ಆರೋಪಿಸಿ, ಕೇರಳದಲ್ಲಿ ಕಾರ್ಮಿಕರಿಗೆ ಲಭ್ಯವಾಗುವ ಸವಲತ್ತುಗಳನ್ನು ವಿವರಿಸಿ, ಕರ್ನಾಟಕದಲ್ಲಿಯೂ ಆ ಸವಲತ್ತುಗಳನ್ನು ಪಡೆಯುವ ಸಲುವಾಗಿ ಸಂಘಟಿತ ಹೋರಾಟ ನಡೆಸುವಂತೆ ಕಾರ್ಮಿಕರಿಗೆ ಕರೆ ನೀಡಿದರು.

ಕೇರಳದ ಕಾರ್ಮಿಕ ಮುಖಂಡರಾದ ಸಿ. ಕಣ್ಣನ್ ಅವರು ಕರ್ನಾಟಕದಲ್ಲಿ ಬೀಡಿ ಕಾರ್ಮಿಕರಿಗಾಗುವ ಅನ್ಯಾಯ, ಮೋಸಗಳನ್ನು ವಿವರಿಸಿ ಅವುಗಳಿಗೆಲ್ಲ ಮೂಲ ಕಾರಣವಾದ ಬಂಡವಾಳಶಾಹಿ ಪದ್ಧತಿಯನ್ನು ನಾಶಮಾಡಲು ಕಾರ್ಮಿಕ ವರ್ಗದ ನೇತೃತ್ವದ ಕ್ರಾಂತಿಗೆ ತಯಾರಾಗಬೇಕೆಂದು ಕರೆ ನೀಡಿದರು. ಬೀಡಿ ಕಾರ್ಮಿಕರ ಸತತ ಹೋರಾಟದ ಪ್ರತಿಫಲವಾಗಿ, ಕೇಂದ್ರ ಸರಕಾರ ಬೀಡಿ ಕಾರ್ಮಿಕರಿಗಾಗಿ ಕಲ್ಯಾಣ ಯೋಜನೆ ಕಾಯ್ದೆ ಮಾಡಿದ್ದರೂ ಕೂಡ ರಾಜ್ಯ ಸರಕಾರಗಳು ಅವುಗಳನ್ನು ಅನುಷ್ಠಾನದಲ್ಲಿ ತಾರದಿರುವಾಗ, ಅವುಗಳನ್ನು ಜ್ಯಾರಿ ಮಾಡಿಸುವ ಶಕ್ತಿ ಕೇಂದ್ರ ಸರಕಾರಕ್ಕಿಲ್ಲ. ಹಾಗಾದರೆ ಅಂಥ ಕಾನೂನುಗಳಿಂದೇನು ಪ್ರಯೋಜನವೆಂಬ ಸವಾಲು ಹಾಕಿದರು ಕಣ್ಣನ್.

ಬಹಿರಂಗ ಸಭೆಯಲ್ಲಿ ಸಿ ಐ ಟಿ ಯು. ಕಾರ್ಯದರ್ಶಿ ಸಿ. ನಂಜುಂಡಪ್ಪ, ಮಹಮ್ಮದ ದಸ್ತಗಿರ, ಪಿ. ರಾಮಚಂದ್ರರಾವ್, ಪದ್ಮಾವತಿ, ಕೈರುನ್ನಿಸಾ ಮೊದಲಾದವರು ಭಾಷಣ ಮಾಡಿದರು. ಪ್ರಾರಂಭದಲ್ಲಿ ಕೆ. ಶಂಕರ ಸ್ವಾಗತಿಸಿದರು. ಕೊನೆಯಲ್ಲಿ ಯು. ಬಿ. ಲೊಕಯ್ಯ ಆಭಾರ ಮನ್ನಿಸಿದರು.

ಸಭೆಯ ಮುಂಚೆ ಹತ್ತು ಸಾವಿರಕ್ಕೂ ಮೇಲ್ಪಟ್ಟು ಅದರಲ್ಲಿ ಹೆಚ್ಚಿನವರು ಮಹಿಳೆಯರು, ವೇಷಭೂಷಣ ಆಟ, ಕೊಂಬುವಾದ್ಯ, ಘೋಷಣೆಗಳೊಂದಿಗೆ ಮೈಲುದ್ದದ ಮೆರವಣಿಗೆಯಲ್ಲಿ ನೆಹರೂ ಮೈದಾನದಲ್ಲಿ ಸಮಾವೇಶಗೊಂಡರು. ಅತಿ ದೊಡ್ಡ ಮೆರವಣಿಗೆ ಎಂಬ ಉದ್ಗಾರ ಮಂಗಳೂರಿನ ಜನರಿಂದ ಕೇಳಿ ಬರುತ್ತಿತ್ತು. ಮೆರವಣಿಗೆ ಹೋಗುವಾಗ ವಿದ್ಯಾರ್ಥಿ ಯುವಜನ ಫೆಡರೇಶನ್, ದಕ್ಷಿಣ ರೈಲ್ವೆ ಕೆಲಸಗಾರರ ಸಂಘ, ಆಟೋರಿಕ್ಷಾ ಅಸೋಸಿಯೇಶನ್‌ನವರೆಲ್ಲ ಬೀಡಿ ಕಾರ್ಮಿಕರ ಸಮ್ಮೇಳನಕ್ಕೆ ಯಶಸ್ವಿ ಕೋರಿ ಹೂವಿನ ಸುರಿಮಳೆ ಗೈಯ್ಯುತ್ತಿದ್ದರು. ಕರ್ನಾಟಕ ಪ್ರಾಂತ ರೈತ ಸಂಘದ ದ. ಕ. ಜಿಲ್ಲಾ ಸಮಿತಿ, ಕೃಷಿ ಕಾರ್ಮಿಕ ಸಂಘಟನೆಯ ಸದಸ್ಯರೂ ಸಾವಿರಾರು ಸಂಖ್ಯೆಯಲ್ಲಿ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ಬುರ್ಖಾ ಧರಿಸಿದ ಮುಸ್ಲಿಂ ಮಹಿಳೆಯರೇ, ಬಿಳಿ ಸೀರೆಯ, ಕೆಂಪು ಸಮವಸ್ತ್ರದ ಸ್ವಯಂ ಸೇವಕರೆಲ್ಲ ಮೆರವಣಿಗೆಯ ಆಕರ್ಷಣೆಯಾಗಿದ್ದರು, ಮಕ್ಕಳು-ಮುದುಕಿಯವರನ್ನೊಳಗೊಂಡು ಸಾವಿರಾರು ಜನ ಜಿಲ್ಲೆಯ ನಾನಾ ಭಾಗಗಳಿಂದ ನಡೆದುಕೊಂಡು ಮೆರವಣಿಗೆಯಲ್ಲಿ ಬಂದಿದ್ದರು. ●



ಸಮಾಜವಾದ ಬಾರದೆ

ಕಾರ್ಮಿಕರ ಸಮಸ್ಯೆಗೆ ಮುಕ್ತಿಯಿಲ್ಲ:

ಸಿ. ಕಣ್ಣನ್

ಎಲ್ಲಿಯವರೆಗೆ ಮೂಲಭೂತವಾದ ಸಾಮಾಜಿಕ ಕ್ರಾಂತಿ ನಡೆದು ಸಮಾಜಿಕ ಕ್ರಾಂತಿ ನಡೆದು ಸಮಾಜವಾದ ಕಾರ್ಯರೂಪಕ್ಕೆ ಬರುವುದಿಲ್ಲವೋ ಅಲ್ಲಿಯವರೆಗೆ ಕಾರ್ಮಿಕರ ಸಮಸ್ಯೆಗಳು ಬಗೆ ಹರಿಯಲು ಸಾಧ್ಯವಿಲ್ಲ. ಬಂಡವಾಳಶಾಹಿ ಸಮಾಜದಲ್ಲಿ ಕಾರ್ಮಿಕ ವರ್ಗ ಬಲಿಷ್ಟವಾಗಿ ಬೆಳೆದು ಬರುವುದನ್ನು ಕಾಂಗ್ರೆಸ್ ಸಹಿಸುವುದಿಲ್ಲ ಆದರೆ ನಾವು ಸಂಘಟಿತರಾಗಿ ಮುಂದುವರಿಯುತ್ತಿದ್ದೇವೆ. ನಿರಂತರ ಶೋಷಣೆ ಬಂಡವಾಳದಾರರಿಂದ ನಡೆಯುತ್ತಿರುವಾಗ ನಾವು ಕೆಲವು ಬೇಡಿಕೆ ಪಡೆದರೂ ಕೂಡ ಅದು ತಾತ್ಕಾಲಿಕ ಪರಿಹಾರವಷ್ಟೆ. ಆದ್ದರಿಂದ ಸುಲಿಗೆ

(8 ನೇ ಪುಟ ನೋಡಿ)

ಸಂವಿಧಾನದ ನೌಕರ ವಿರೋಧಿ ಕಲಮುಗಳನ್ನು ಕಿತ್ತು ಹಾಕಲು ಒತ್ತಾಯ

ಸಂವಿಧಾನದ 310 ಹಾಗೂ 311 ನೇ ಕಲಮುಗಳು ವಸಾಹತುಶಾಹೀ ಆಳ್ವಿಕೆಯ ಪಳಯುಳಿಕೆಗಳು ಇದನ್ನು ಬ್ರಿಟಿಶರ 1935 ರ ಕಾನೂನಿನಿಂದ ಯಥಾವತ್ತಾಗಿ ಎತ್ತಿ ನಮ್ಮ ಸಂವಿಧಾನದಲ್ಲಿ ಹಾಕಲಾಗಿದೆ. ಇದು ಒಡೆಯ ದಾಸ ಸಂಬಂಧಗಳ ಮೇಲೆ ಆಧಾರಿತವಾಗಿದ್ದು ಪ್ರಜಾಪ್ರಭುತ್ವ ವಿರೋಧಿಯಾಗಿದೆ. ಅಧಿಕಾರಶಾಹಿಗೆ ಇದು ಅನಿರ್ಬಂಧಿತ ಅಧಿಕಾರ ನೀಡಿ ತಮಗೆ ವಿರುದ್ಧವಿರುವ ನೌಕರರ ವಿರುದ್ಧ ಸೇಡು ತೀರಿಸಿಕೊಳ್ಳಲು ಅವಕಾಶ ನೀಡಿದರೆ ಆಳುವ ವರ್ಗಗಳಿಗೆ ಸರಕಾರೀ ನೌಕರರ ಸಂಘಟನೆಯ ಆಂದೋಲನವನ್ನೇ ಮೊಟಕುಗೊಳಿಸಲು ನೆರವಾಗುತ್ತಿದೆ. ಇದನ್ನು ಸಂವಿಧಾನದಿಂದ ಕಿತ್ತು ಹಾಕಬೇಕು ಎಂದು ಸಿ.ಪಿ.ಐ. (ಎಂ)ನ ಕಾಂ. ಅಜಯ್ ಬಿಸ್ವಾಸ್ ಲೋಕಸಭೆಯಲ್ಲಿ ಮಾತನಾಡುತ್ತಾ ಹೇಳಿದರು. ಅವರು ಜಂಗಾರೆಡ್ಡಿಯವರು ಮಂಡಿಸಿದ ಸಂವಿಧಾನ (ತಿದ್ದುಪಡಿ) ಮಸೂದೆಯನ್ನು ಬೆಂಬಲಿಸಿ ಮಾತನಾಡುತ್ತಿದ್ದರು.

ದೇಶದ ಭದ್ರತೆಗೆ ವಿರುದ್ಧವಾಗಿ ವರ್ತಿಸುವ ನೌಕರರನ್ನು ಕುರಿತಾದದ್ದು ಈ ಕಲಮುಗಳು ಎಂದು ಹೇಳಲಾಗುತ್ತದೆ ಆದರೆ ಈ ಕಲಮುಗಳ ಪ್ರಕಾರ ನೌಕರಿಯಿಂದ ತೆಗೆದು ಹಾಕಲ್ಪಟ್ಟವರಲ್ಲಿ ಯಾರನ್ನಾದರೂ ಕೂಡಾ ದೇಶದ ಭದ್ರತೆಯ ವಿರುದ್ಧ ವರ್ತಿಸುತ್ತಿದ್ದಾನೆ ಎಂಬ ಕಾರಣಕ್ಕಾಗಿ ತೆಗೆದು ಹಾಕಲಾಗಿದೆಯೇ ಎಂದು ಕಾಂ. ಬಿಸ್ವಾಸ್ ಸರಕಾರಕ್ಕೆ ಸವಾಲು ಹಾಕಿ ಒಂದೆರಡು ಉದಾಹರಣೆಗಳನ್ನು ಕೊಟ್ಟರು. ಈಗ ಸಿ.ಪಿ.ಐ (ಎಂ)ನ ಎಂ.ಪಿ. ಯಾಗಿರುವ ಸುಕೊಮಲ್ ಸೇನ್‌ರವರನ್ನು ಈ ಕಲಮಿನ ಪ್ರಕಾರ ಕೆಲಸದಿಂದ ತೆಗೆದು ಹಾಕಲಾಯಿತು. ತ್ರಿಪುರಾದ ಈಗಿನ ಒಬ್ಬ ಮಂತ್ರಿ ವಿವೇಕಾನಂದ ಭಾಮಿಕ್ ಅಧ್ಯಾಪಕರಾಗಿದ್ದಾಗ ಈ ಕಲಮಿನ ಪ್ರಕಾರ ಅವರನ್ನು ತೆಗೆದು ಹಾಕಲಾಯಿತು. ಆದರೆ ದೇಶದ ಭದ್ರತೆಯ ಪ್ರಶ್ನೆಯ ಮೇಲೆ ಈ ಕ್ರಮ ಕೈಗೊಂಡ ಆದೇ ರಾಜ್ಯಪಾಲ ಅವರು ಎಂ. ಎಲ್. ಎ. ಆಗಿ ಚುನಾಯಿತರಾಗಿ ಮಂತ್ರಿಗಳಾದಾಗ ಸಂವಿಧಾನಕ್ಕೆ, ದೇಶದ ಭದ್ರತೆಗೆ ಬದ್ಧತೆಯ ಪ್ರತಿಜ್ಞೆ ಕೊಡಿಸಿದರು! ಇದು ವಿಪರ್ಯಾಸವಲ್ಲವೇ; ನಿಜವಾಗಿ ಈ ಕಲಮುಗಳಿರುವುದು ದೇಶದ ಭದ್ರತೆಗಾಗಿ ಅಲ್ಲ ಎಂಬುದನ್ನು ಇನ್ನೂ ಹಲವಾರು ಉದಾಹರಣೆಗಳು ಸ್ಪಷ್ಟಪಡಿಸಿವೆ ಎಂದ ಕಾಂ. ಬಿಸ್ವಾಸ್ 1 ಕೋಟಿ 20 ಲಕ್ಷ ಕೇಂದ್ರ ಹಾಗೂ ರಾಜ್ಯ ಸರಕಾರೀ ನೌಕರರ ಒಕ್ಕೊರಲಿನ ಬೇಡಿಕೆಯನ್ನು ಮನ್ನಿಸಿ ಈ ಕಲಮುಗಳನ್ನು ಸಂವಿಧಾನದಿಂದ ಕಿತ್ತುಹಾಕಬೇಕೆಂದು ಒತ್ತಾಯಿಸಿದರು.

ನಾಗರಿಕತ್ವ ತಿದ್ದುಪಡಿ–ಸಿ ಪಿ ಐ (ಎಂ) ಸದಸ್ಯರ ತೀವ್ರ ವಿರೋಧ

ನಾಗರಿಕತ್ವ (ತಿದ್ದುಪಡಿ) ಶಾಸನ ಎಂಬ ಕರಾಳ ಕಾನೂನೊಂದನ್ನು ಸಂಸತ್ತಿನ ಪ್ರಸಕ್ತ ಅಧಿವೇಶನದಲ್ಲಿ ಅಂಗೀಕರಿಸಿತು. 1955ರ ನಾಗರಿಕತ್ವ ಕಾನೂನಿನ ಪ್ರಕಾರ ಜನವರಿ 26- 1950 ರ ನಂತರ ಭಾರತದಲ್ಲಿ ಹುಟ್ಟಿದ ಯಾವುದೇ ವ್ಯಕ್ತಿ ಹುಟ್ಟಿನಿಂದ ಭಾರತದ ನಾಗರಿಕನಾಗುತ್ತಾನೆ. ಸುಮಾರಾಗಿ ಜಗತ್ತಿನ ಎಲ್ಲಾ ದೇಶಗಳಲ್ಲೂ ಇದೇ ವಾಡಿಕೆಯಿದೆ. ಆದರೆ ಈ ತಿದ್ದುಪಡಿಯ ನಂತರ ಒಬ್ಬ ವ್ಯಕ್ತಿ ಈ ದೇಶದಲ್ಲಿ ಹುಟ್ಟಿದಾಗ ಆತನ ತಂದೆ ಅಥವಾ ತಾಯಿ ಭಾರತೀಯರಾಗಿದ್ದರೆ ಮಾತ್ರ ಆತ ಭಾರತದ ನಾಗರಿಕನಾಗಬಲ್ಲ. ಅಲ್ಲದೆ ವಾಸದ ಮೂಲಕ ನಾಗರಿಕತ್ವ ಪಡೆಯುವ ವಿಧಾನವನ್ನು ಕೂಡಾ ಈ ಮಸೂದೆ ಬಿಗಿಗೊಳಿಸಿದೆ. ಈ ಅಪಾಯಕಾರೀ ಮಸೂದೆಯನ್ನು ಮಂಡಿಸದಂತೆ ತಡೆಯಲು ಸಿ.ಪಿ.ಐ. (ಎಂ)ನ ಅರು ಸಂಸತ್ ಸದಸ್ಯರು ಸರ್ವ ಪ್ರಯತ್ನ ನಡೆಸಿದರು.

ಕಾಂ. ವಾಸುದೇವ ಆಚಾರ್ಯ ಈ ತಿದ್ದುಪಡಿಯ ಅಗತ್ಯವನ್ನು ಪ್ರಶ್ನಿಸಿ ಗಡಿಪ್ರದೇಶಗಳಲ್ಲಿ ಕಾವಲನ್ನು ಬಿಗಿಪಡಿಸಿದರೆ ಸಾಕಷ್ಟಾಗುತ್ತಿತ್ತು ಎಂದರೆ ಕಾಂ. ಸೋಮನಾಥ್ ಚಟರ್ಜಿಯವರು ಇದು ದೇಶದ ಜನತೆ ಹಾಗೂ ಭಾರತೀಯ ಮೂಲದ ಜನ ಇವರ ನಡುವೆ ಹೆಚ್ಚೆಚ್ಚು ಅಪನಂಬಿಕೆಯನ್ನು ವಿಭಜನೆಯನ್ನು ಸೃಷ್ಟಿಸುತ್ತದೆ ಎಂದರು. ಕಾಂ. ಮಾನಿಕ್‌ಸನ್ಯಾಲ್ ಈ ತಿದ್ದುಪಡಿ ಹುಟ್ಟಿನಿಂದ ನಾಗರಿಕತ್ವ ಪಡೆಯುವ ಸ್ವಾಭಾವಿಕ ಹಕ್ಕನ್ನು ಕಸಿದುಕೊಳ್ಳುತ್ತದೆ ಎಂದರು. ಕಾಂ. ಅನಿಲ್ ಬಸು ಮಾತನಾಡುತ್ತಾ ಇದು ಇನ್ನಷ್ಟು ಮನೆ–ಮಾಠಿಲ್ಲದ ನಾಗರಿಕತ್ವವಿಲ್ಲದ ಜನಗಳನ್ನು ಸೃಷ್ಟಿಸಿ ಇನ್ನಷ್ಟು ಸಮಸ್ಯೆಯುಂಟು ಮಾಡುತ್ತದೆ ಎಂದರು. ಈ ತಿದ್ದುಪಡಿ ಪ್ರತ್ಯೇಕತಾವಾದಿಗಳಿಗೆ ಇನ್ನಷ್ಟು ಅವಕಾಶ ಕಲ್ಪಿಸಿಕೊಡುತ್ತದೆ ಎಂದು ಕಾಂ. ಆನಂದ ಪಾಠಕ್ ಸರಕಾರವನ್ನು ಎಚ್ಚರಿಸಿದರು.

ರೈಲ್ವೆ ಸಾಗಾಣಿಕೆ ದರ ಏರಿಕೆಗೆ ವಿರೋಧ

ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ರಾಷ್ಟ್ರೀಯ ಯೋಜನೆಯ 16./. ರೈಲ್ವೆಗಾಗಿ ಮೀಸಲಿಡಲಾಗಿತ್ತು. ನಂತರ ಅದು ಇಳಿಮುಖವಾಗುತ್ತಾ ಬಂದು ಆರನೇ ಯೋಜನೆಯಲ್ಲಿ 5.23 /. ಆಯಿತು. ಈ ಯೋಜನೆಯಲ್ಲೂ 6.55 /. ವಾಗುವ ಅಂದಾಜು ಇದೆಯಷ್ಟೆ. ಅಂದರೆ ದೇಶದ ಈ ಅತ್ಯಂತ ವ್ಯಾಪಕ ಸಾರ್ವಜನಿಕ ಸೇವಾ ವ್ಯವಸ್ಥೆಗೆ ರಾಷ್ಟ್ರೀಯ ಯೋಜನೆಯಲ್ಲಿ ಸಿಕ್ಕಿರುವ ಮೊತ್ತ ಅತ್ಯಲ್ಪ ಇದರಿಂದಾಗಿಯೇ ಆಗಾಗ ಸರ್ಕಾರ ಪ್ರಮಾಣದರವನ್ನೋ, ಸಾಮಾನು ಸಾಗಾಣಿಕೆ ದರವನ್ನೋ ಹೆಚ್ಚಿಸುತ್ತಾ ತನ್ನ ಅಸಮಾರ್ಥ್ಯದ ದುಷ್ಪರಿಣಾಮಗಳನ್ನು ಜನಸಾಮಾನ್ಯರ ತಲೆಮೇಲೆ ಹೇರುತ್ತದೆ. ಪ್ರಸ್ತುತ ಅಧಿವೇಶನದಲ್ಲಿ 320 ಕೋಟಿ ರೂಗಳ ಅಧಿಕ ಮೊತ್ತಕ್ಕಾಗಿ ರೈಲ್ವೆ ಮಂತ್ರಿಗಳು ಮಂಡಿಸಿದ ಮಸೂದೆಯನ್ನೂ ವಿರೋಧಿಸಿ ರಾಜ್ಯ ಸಭೆಯಲ್ಲಿ ಮಾತನಾಡುತ್ತಾ ಸಿ.ಪಿ.ಐ. (ಎಂ)ನ ಕಾಂ. ಸುಕೋಮಲ್ ಸೇನ್ ಹೀಗೆಂದರು.

ಒಂಭತ್ತು ತಿಂಗಳ ಹಿಂದೆಯಷ್ಟೇ ಪ್ರಮಾಣದರಗಳನ್ನು ಏರಿ 106 ಕೋಟಿ ರೂ.ಗಳಿಸಿದ 69 ಕೋಟಿ ರೂ.ಗಳ ಮಿಗುತಾಯ ರೈಲ್ವೇ ಬಜೆಟ್ ಮಂಡಿಸುವಾಗ ರೈಲ್ವೆ ಮಂತ್ರಿಗಳು ಪ್ರಯಾಣ ಸೌಲಭ್ಯಗಳನ್ನು ಹೆಚ್ಚಿಸಲಾಗುವುದೆಂದು ಮಾತುಕೊಟ್ಟಿದ್ದರು, ಆದರೆ ಸೌಲಭ್ಯ ಸುಧಾರಿಸುವುದು ಆಗಲೇ ಇಲ್ಲ, ಬದಲಿಗೆ 69 ಕೋಟಿ ರೂ.ಗಳ ಮಿಗುತಾಯ 415 ಕೋಟಿ ರೂ. ಗಳ ಅಗಾಧ ಖೋತಾವಾಗಲು ಕಾರಣವೇನೆಂದು ಸದಸ್ಯರು ರೈಲ್ವೇ ಮಂತ್ರಿಗಳನ್ನು ಪ್ರಶ್ನಿಸಿದರು. ಸರ್ಕಾರದ ಈ ಕ್ರಮದಿಂದಾಗಿ ಬೆಲೆಗಳು ಮತ್ತಷ್ಟು ಏರುವೆಯೆಂದು ಕಾಂ. ಸೇನ್ ಹೆವಿ ಹೇಳಿದರು.

ಮುಂದುವರೆದು ರೈಲ್ವೇ ಅಪಘಾತಗಳ ಬಗ್ಗೆ ಮಾತನಾಡುತ್ತಾ ಕಾಂ. ಸೇನ್. ಸಂರಕ್ಷಣಾ ನಿಯಮಗಳನ್ನು ತೀವ್ರವಾಗಿ ಉಲ್ಲಂಘಿಸಲಾಗುತ್ತಿದೆ ಎಂದು ಗಂಭೀರವಾಗಿ ನುಡಿದರು. ಇತ್ತೀಚಿಗೆ 162 ಡೌನ್ ರೈಲಿನಲ್ಲಾದ ಅಪಘಾತದ ಉದಾಹರಣೆ ನೀಡುತ್ತಾ ಈ ರೈಲುಗಾರ್ಡ್‌ನ್ನು ಇಲ್ಲದೇನೇ ಓಡಿಸಲಾಗಿತ್ತು ಎಂಬ ಅಂಶವನ್ನು ಬಯಲಿಗೆಳೆದು ಈ ಅಪಘಾತದ ನಂತರವು ಕೆಲವು ಸಮಯದ ಹಿಂದೆ ರೈಲ್ವೇ ಮಂಡಳಿ ಬ್ರೇಕ್–ವ್ಯಾನ್ ಹಾಗೂ ಗಾರ್ಡ್‌ಗಳಿಲ್ಲದೆ ರೈಲುಗಳನ್ನು ಓಡಿಸಲು ಹೊರಡಿಸಿದ ಸುತ್ತೋಲೆಯನ್ನು ವಾಪಾಸು ಪಡೆದಿಲ್ಲ ಎಂಬುದನ್ನು ಸದನದ ಗಮನಕ್ಕೆ ತಂದರು ಚಾಲಕರನ್ನು ಹತ್ತುಗಂಟೆಗೂ ಹೆಚ್ಚು ಕಾಲ ದುಡಿಸುವುದು ಹಳೆಯದಾದ ಹಳ್ಳಿಗಳನ್ನು, ಇಂಜಿನುಗಳನ್ನು, ಬೋಗಿಗಳನ್ನು ಬದಲಿಸದೇ ಇರುವುದು ಮುಂತಾದ ರೈಲ್ವೇ ಮಂಡಳಿಯ ತೀವ್ರ ಅವಸ್ಥೆಯಿಂದಾಗಿ ಹಲವಾರು ಜೀವಗಳು ಬಲಿಯಾಗುವುದನ್ನು ತಡೆಯಬೇಕೆಂದು ಕಾಂ. ಸೇನ್ ಒತ್ತಾಯಿಸಿದರು.

ಸಂಸತ್ತಿನಲ್ಲಿ

ಮಹಿಳೆಯರ ತುಚ್ಛೀಕಾರಕ್ಕೆ ಸರ್ಕಾರವೇ ಹೊಣೆ

ರಾಜ್ಯಸಭೆ ಸಮೂಹ ಮಾಧ್ಯಮಗಳಲ್ಲಿ ಮಹಿಳೆಯರನ್ನು ಅಶ್ಲೀಲವಾಗಿ ಪ್ರತಿನಿಧಿಸುವುದನ್ನು ಪ್ರತಿಬಂಧಿಸುವ ಒಂದು ಶಾಸನವನ್ನು ಅಂಗೀಕರಿಸಿತು. ಪತ್ರಿಕೆಗಳಲ್ಲಿ,ಜಾಹೀರಾತುಗಳಲ್ಲಿ ಮಹಿಳೆಯರನ್ನು ಅಶ್ಲೀಲ ಪ್ರದರ್ಶನ ಯಾವುದು ಎಂಬುದನ್ನು ನಿರ್ವಹಿಸಿರುವ ಈ ಶಾಸನ ಅಂಗೀಕಾರವಾಗುವ ಮೊದಲು ನಡೆದ ಚರ್ಚೆಯನ್ನು ಆರಂಭಿಸುತ್ತಾ ಸಿ ಪಿ.ಐ. (ಎಂ.) ಸದಸ್ಯೆ ಕಾಂ. ಕನಕಮುಖರ್ಜಿಯವರು ಈ ಮಸೂದೆಯಿಂದ ಸ್ವಲ್ಪ ಪ್ರಯೋಜನವಾಗಬಹುದೆಂಬುದನ್ನು ಒಪ್ಪಿಕೊಳ್ಳಬಹುದಾದರೂ ಅದನ್ನು ಪೂರ್ಣವಾಗಿ ಜಾರಿಗೆ ತರುವ ಸರ್ಕಾರದ ಸಾಮರ್ಥ್ಯದ ಬಗ್ಗೆ ಸಂಶಯವಿದೆ ಎಂದು ಹೇಳಿದರು ಯಾಕೆಂದರೆ ಇಂತಹ ಹಲವಾರು ಶಾಸನಗಳು ಇನ್ನೂ ಸರಕಾರಿ ಕಡತದಿಂದ ದೇಶದ ವಾಸ್ತವ ಪ್ರಪಂಚಕ್ಕಿಳಿದಿಲ್ಲ. ಆದ್ದರಿಂದ ಮಹಿಳೆಯರ ಮೇಲಿನ ಒಂದು ಅನ್ಯಾಯವನ್ನು ತೊಲಗಿಸುವುದಕ್ಕಿಂತ ಮಹಿಳೆಯರಿಗಾಗಿ ಏನೋ ಮಾಡಲಾಗುತ್ತಿದೆಯೆಂಬುದನ್ನು ತೋರಿಸುವುದೆ ಈ ಶಾಸನದ ಪ್ರಮುಖ ಉದ್ದೇಶವಾಗಿರುವಂತಿದೆ. ಸರ್ಕಾರೀ ಸುದ್ದಿ ಮಾಧ್ಯಮಗಳಲ್ಲೇ ಮಹಿಳೆಯರ ಸ್ಥಾನಮಾನಗಳನ್ನು ಹೀಗೆಯಲಾಗುತ್ತಿದೆಯಾದ್ದರಿಂದ ಈ ಅನ್ಯಾಯಕ್ಕೆ ಸರ್ಕಾರವೇ ಹೊಣೆಯಾಗಬೇಕೆಂದು ಹೇಳಿದ ಕಾಂ. ಮುಖರ್ಜಿಯವರು ಟಿ.ವಿ.ಯಲ್ಲಿ ಪ್ರದರ್ಶಿಸುವ ಗೋದ್ರೇಜ್ ಕಂಪೆನಿಯ "ನನ್ನ ಫ್ರಿಜ್ಜ್‌ನ್ನಾಗಲೀ ಹೆಂಡತಿಯನ್ನಾಗಲೀ ಬದಲಿಸಬೇಕಾದ ಅಗತ್ಯವೇ ಬಂದಿಲ್ಲ" ಎಂಬ ಜಾಹೀರಾತಿನಲ್ಲಿ ಹೇಗೆ ಮಹಿಳೆಯರನ್ನು ಜಾಹೀರಾತಿನ ಸರಕಿನೊಂದಿಗೆ ಹೋಲಿಸಲಾಗುತ್ತಿದೆ. ಎಂದು ಒಂದು ಉದಾಹರಣೆ ನೀಡಿದರು, ಸರಕಾರವೇ ಪ್ರಕಟಿಸಿದ ಪಠ್ಯಪುಸ್ತಕಗಳಲ್ಲೂ ಇದೇ ರೀತಿ ಮಹಿಳೆಯರ ಸ್ಥಾನಮಾನಗಳನ್ನು ತುಚ್ಛೀಕರಿಸುವ ಅಂಶಗಳಿವೆ ಎಂದು ಹೇಳಿ ಈ ಶಾಸನ ಜ್ಯಾರಿಗೆ ಬಂದ ಕೂಡಲೇ ಅಂತಹ ಪಠ್ಯಪುಸ್ತಕಗಳನ್ನು ಸರ್ಕಾರ ಪ್ರತಿಬಂಧಿಸುವುದೇ ಎಂದು ಅವರು ಕೇಳಿದರು ಮುಂದುವರೆದು ಮಾತನಾಡಿದ ಕನಕಮುಖರ್ಜಿಯವರು ಕೇವಲ ಪ್ರಚಾರದ ಮೂಲಕ ಒಂದು ಶಾಸನದ ಮೂಲಕ ಜನಗಳ ದೃಷ್ಟಿಕೋನವನ್ನು ಬದಲಿಸಲು ಸಾಧ್ಯವಾಗುವುದಿಲ್ಲ, ಅದು ಸಾಧ್ಯವಾಗಬೇಕಾದರೆ ವಾಸ್ತವ ಸಾಮಾಜಿಕ ಪರಿಸ್ಥಿಗಳು ಬದಲಾಗಲೇ ಬೇಕು ಎಂದರು.

ಬೀಡಿ ಸಮ್ಮೇಳನದ ತೀರ್ಮಾನಗಳು

ಡಿ.-17 ರಂದು ಬೀಡಿ ಕಾರ್ಮಿಕರ ಮುಷ್ಕರವನ್ನು ಯಶಸ್ವಿಗೊಳಿಸಿ

ಕೇಂದ್ರ ಸರಕಾರವು ಅನುಸರಿಸುತ್ತಾ ಬರುತ್ತಿರುವ ತಪ್ಪು ಕೈಗಾರಿಕಾ ನೀತಿ ಮತ್ತು ತೆರಿಗೆ ನೀತಿಯ ಫಲವಾಗಿ 40 ಲಕ್ಷಕ್ಕಿಂತಲೂ ಅಧಿಕ ಕಾರ್ಮಿಕರಿಗೆ ಉದ್ಯೋಗ ಒದಗಿಸುತ್ತಿರುವ ಬೀಡಿ ಕೈಗಾರಿಗೆಯು ತೀವ್ರ ಆಘಾತಕ್ಕೆ ಒಳಗಾಗಿದೆ. ಕೈಗಾರಿಕೆಯ "ಸಂಘಟಿತ" ರೂಪವೇ ತಪ್ಪಿ ಅದು ಶಿಥಿಲವಾಗುತ್ತಾ ಹೋಗುತ್ತಿದೆ.

ಮುಖ್ಯವಾಗಿ ತೆರಿಗೆಯನ್ನು ತಂಬಾಕಿನ ಮೇಲೆ ವಿಧಿಸುವ ಬದಲು ಈಗ ಬೀಡಿಗಳ ಮೇಲೆ ವಿಧಿಸುತ್ತಿರುವುದು. ಅದೂ ಲೇಬಲ್ ಬೀಡಿಗಳಿಗೆ ತೆರಿಗೆ, ಲೇಬಲ್ ಇಲ್ಲದೆ ಬೀಡಿಗಳಿಗೆ ಒಂದು ಪ್ರಮಾಣದವರೆಗೆ ತೆರಿಗೆ ಇಲ್ಲದೇ ಇರುವುದು ಕೈಗಾರಿಕಾ ಪ್ರಗತಿಗೆ ತೀವ್ರ ಆಘಾತವಾಗಿದೆ. ಇದರಿಂದ ನಿಯಂತ್ರಿತ, ಮತ್ತು ಸಂಘಟಿತ, ಬೀಡಿ ಕೈಗಾರಿಕೆಗೆ ಧಕ್ಕೆ ಬಂದಿದೆ, ಮಾತ್ರವಲ್ಲ, ಲಕ್ಷಾಂತರ ಬೀಡಿ ಕಾರ್ಮಿಕರ ನ್ಯಾಯವಾದ ಅನುಕೂಲತೆಗಳಿಗೆ ಭಾದಕವಾಗುತ್ತದೆ. "ಕಾರ್ಮಿಕರಿಲ್ಲದೆ ಬೀಡಿ ತಯಾರಾಗಿ ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಿರುವ ವಿಚಿತ್ರ ಸನ್ನಿವೇಶವನ್ನು" ಈ ತೆರಿಗೆ ನೀತಿ ಉಂಟು ಮಾಡಿದೆ. ಸರಕಾರಕ್ಕೆ ತೆರಿಗೆ ಪ್ರಮಾಣ ಕಡಿಮೆಯಾಗಿದೆ.

ಆದಕಾರಣ ಈ ಸಮ್ಮೇಳನವು ತೆರಿಗೆ ನೀತಿಯನ್ನು ಬದಲಾಯಿಸ ಬೇಕೆಂದು ಕೇಂದ್ರ ಸರಕಾರವನ್ನು ಒತ್ತಾಯಿಸುತ್ತದೆ. ಎಲ್ಲಾ ಬೀಡಿಗಳಿಗೂ ಯಾವುದೇ ರಿಯಾಯಿತಿ ಇಲ್ಲದೆ ತೆರಿಗೆ ವಿಧಿಸಬೇಕು ಇಲ್ಲವೇ ಹಿಂದೆ ಇದ್ದಂತೆ ತಂಬಾಕಿನ ಮೇಲೆಯೂ ತೆರಿಗೆ ಹೊರಿಸಬೇಕು.

ಇದಲ್ಲದೆ ಕೇಂದ್ರ ಸರಕಾರವು ಬೀಡಿ, ಕಾರ್ಮಿಕರಿಗೆ ಮನೆ ಕಟ್ಟಲು, ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸಲು, ಅವರು ಆರೋಗ್ಯ ಕಾಪಾಡಲು ಬೀಡಿ ವೆಲ್ಫೇರ್ ಕಾನೂನನ್ನು ಜಾರಿ ಮಾಡಿಸುವುದರಲ್ಲಿ ತೀವ್ರ ಲೋಪದೋಷ ಹಾಗೂ ಭ್ರಷ್ಟಾಚಾರ ತುಂಬಿದ್ದು, ಮಾತ್ರವಲ್ಲ ಸಂಗ್ರಹವಾಗುತ್ತಿರುವ ಸೆಸ್ಸಿನ 2:3 ಸಿಬ್ಬಂದಿಗೇನೇ ಖರ್ಚಾಗುತ್ತಿರುವುದು ; ತೀರಾ ಗಂಭೀರ ವಿಷಯವಾಗಿವೆ. ಕರ್ನಾಟಕ ರಾಜ್ಯದಲ್ಲಿ 6 ಲಕ್ಷ ಬೀಡಿ ಕಾರ್ಮಿಕರಿದ್ದರೂ ಒಂದು ಕೋಟಿ ಕೂಡಾ ಖರ್ಚಾಗುತ್ತಿಲ್ಲ. ಮನೆ ಕಟ್ಟಲು ಹಣವನ್ನೇ ಕೊಡುತ್ತಿಲ್ಲ 10,000 ಜಾಸ್ತಿ ಬೀಡಿ ಕಾರ್ಮಿಕರಿರುವಲ್ಲಿ ಕೂಡ ಡಿಸ್ಪೆನ್ಸರೀಯನ್ನು ಈವರೆವಿಗೂ ಸ್ಥಾಪನೆ ಮಾಡಲಿಲ್ಲ. ವೆಲ್‌ಫೇರ್ ಸಲಹಾ ಸಮಿತಿಗಳಲ್ಲಿ ನಿಜವಾಗಿ ಬೀಡಿ ಕಾರ್ಮಿಕರನ್ನು ಪ್ರತಿನಿಧಿಕರಿಸುತ್ತಿರುವ ಸಿ.ಐ.ಟಿ.ಯು.ಗೆ ಪ್ರಾತಿನಿಧ್ಯವಿಲ್ಲ. ಕೇಂದ್ರ ಸರಕಾರದ ಈ ನೀತಿಯನ್ನು ಈ ಸಮ್ಮೇಳನವು ಖಂಡಿಸುತ್ತದೆ.

ದಕ್ಷಿಣ ವಲಯ ಬೀಡಿ ಕಾರ್ಮಿಕರ ಸಮಿತಿಯು ತಾ: 29—11—86 ರಂದು ಸಭೆ ಸೇರಿ ಬೆಂಗಳೂರಿನಲ್ಲಿ ಕೊಟ್ಟ ಕರೆಯ ಮೇರೆಗೆ ಡಿಸೆಂಬರ್ 17 ರಂದು ಕರ್ನಾಟಕ ರಾಜ್ಯದ್ಯಾಂತ ಬೀಡಿ ಕಾರ್ಮಿಕರು ಸಾರ್ವತ್ರಿಕ ಮುಷ್ಕರ ಹೂಡಬೇಕೆಂದು ಈ ಸಮ್ಮೇಳನವು ಕರೆಕೊಟ್ಟಿತು.

ಈ ದಕ್ಷಿಣ ವಲಯ ಬೀಡಿ ಕಾರ್ಮಿಕರ ಸಮಿತಿಯು ಕೇಂದ್ರ ಮತ್ತು ರಾಜ್ಯ ಸರಕಾರಗಳ ಮುಂದೆ ಇರಿಸಿದ ಈ ಕೆಳಗಿನ 8 ಅಂಶಗಳನ್ನು ಈ ಸಮ್ಮೇಳನವು ಬೆಂಬಲಿಸುತ್ತದೆ.

1. ದೇಶಾದ್ಯಂತ ಬೀಡಿ ಮತ್ತು ಸಿಗಾರ್ ಆಕ್ಟನ್ನು ಸಂಪೂರ್ಣವಾಗಿ ಜಾರಿಗೊಳಿಸಬೇಕು

2. ಎಲ್ಲಾ ಬೀಡಿಗಳಿಗೆ ಯಾವುದೇ ವಿನಾಯಿತಿ ಇಲ್ಲದೇ ತೆರಿಗೆ ಹೊರಿಸಬೇಕು.

3. ವೆಲ್‌ಫೇರ್ ಕಾರ್ಯಕ್ರಮಕ್ಕೆ ಮೀಸಲಿಡುವ ಹಣದ ಮೊಬಲಗನ್ನು ಅಧಿಕಗೊಳಿಸಬೇಕು.

4. ಬೀಡಿ ಕಾರ್ಮಿಕರಿಗೆ ಮನೆ ನಿವೇಶನ ಒದಗಿಸಬೇಕು. ಮನೆ ಕಟ್ಟಲಿಕ್ಕೆ ಸಹಾಯಧನ ನೀಡಬೇಕು.

5. ರೂ. 15 :-ನ್ನು ಸಾವಿರ ಬೀಡಿಗೆ ಮೂಲ ಕೂಲಿಯಾಗಿ, ಕನಿಷ್ಠ ಕೂಲಿ ಜಾರಿ ಗೊಳಿಸಬೇಕು. 470 ಮೇಲಿನ ಪ್ರತಿ ಪಾಯಿಂಟಿಗೆ 3 ಪೈಸೆಯಂತೆ ತುಟ್ಟಿ ಭತ್ಯೆ ಕೊಡಬೇಕು.

6. ಕಂಟ್ರ್ಯಾಕ್ಟು ಪದ್ಧತಿ ರದ್ದಾಗಬೇಕು.

7. ಪ್ರಾವಿಡೆಂಟ್ ಫಂಡ್ ಜಾರಿಯಾಗಬೇಕು, ಮತ್ತು ಅದಕ್ಕೆ ಸಂಬಂದಪಟ್ಟ ಲೆಕ್ಕದ ರಸೀದಿಯನ್ನು ಕಡ್ಡಾಯವಾಗಿ ನೀಡಬೇಕು.

8. ಲಾಗೆ ಪುಸ್ತಕಗಳನ್ನು ಮತ್ತು ಗುರುತು ಚೀಟಿಗಳನ್ನು ಎಲ್ಲಾ ಕಾರ್ಮಿಕರಿಗೂ ಕೊಡಬೇಕು.

9. ಲಿಂಗಭೇಧವಿಲ್ಲದೆ ಪಾಸ್ ಪುಸ್ತಕಗಳನ್ನು ಕೊಡಬೇಕು. ಮತ್ತು ಜೀನಾಮಿ ಪಾಸ್ ಪುಸ್ತಕಗಳನ್ನು ಕೊಡುವುದನ್ನು ನಿಷೇಧಿಸಬೇಕು

ಈ ಮೇಲಿನ ಬೇಡಿಕೆಗಳನ್ನು ಒತ್ತಾಯಿಸಿ, ಡಿಶಂಬರ್ 17 ರಂದು ನಡೆಯುವ ಬೀಡಿ ಕಾರ್ಮಿಕರ ಸಾರ್ವತ್ರಿಕ ಮುಷ್ಕರವನ್ನು ಯಶಸ್ವಿಗೊಳಿಸಲು ಈ ಸಮ್ಮೇಳನವು ಕರೆ ನೀಡುತ್ತದೆ.

0

ಗುರ್ಖಾಲ್ಯಾಂಡ್ ಚಳುವಳಿಗೆ ಖಂಡನೆ.

ಸಿ ಐ ಟಿ ಯು ರಾಜ್ಯ ಸಮಿತಿಯ ಕರೆಯ ಮೇರೆಗೆ ದಿನಾಂಕ 8-11-86 ರಂದು ಹರಿಹರದ ಮೈಸೂರ್ ಕಿರ್ಲೋಸ್ಕರ್ ಕೆಲಸಗಾರರ ಸಂಘವು ತನ್ನ ಸರ್ವ ಸದಸ್ಯರ ಸಭೆಯಲ್ಲಿ ಗೂರ್ಖಾಲ್ಯಾಂಡ್ ಬೇಡಿಕೆಗಾಗಿ ನಡೆಯುತ್ತಿರುವ ದೇಶದ್ರೋಹಿ ಚಳುವಳಿಯನ್ನು ಮತ್ತು ಆ ಬಗ್ಗೆ ಪ್ರಧಾನಮಂತ್ರಿ ರಾಜೀವ್‌ಗಾಂಧಿಯವರ ಬೇಜವಾಬ್ದಾರಿಯುತ ನಿಲುವೆಯನ್ನು ಖಂಡಿಸಲಾಯ್ತು ಮತ್ತು ಈ ಛಿದ್ರಕಾರಿ ಚಳುವಳಿಕಾರರ ದಾಳಿಯನ್ನು ಎದುರಿಸುತ್ತಿರುವ ಡಾರ್ಜಿಲಿಂಗ್ ಪ್ರದೇಶದ ಸಿಐಟಿಯು ಕಾರ್ಯಕರ್ತರಿಗೆ ಹಾಗೂ ಕಾರ್ಮಿಕ ಬಂಧುಗಳಿಗೆ ಸೌಹಾರ್ದ ಬೆಂಬಲ ವ್ಯಕ್ತಪಡಿಸಲಾಯ್ತು. ಸಭೆಯಲ್ಲಿ ಕಾ|| ಆರ್. ಸಿ. ಉನ್ನಿತ್ತನ್, ಕಾ|| ಎನ್. ಜಿ. ಪಠಾಣ ಮತ್ತು ಕಾ|| ಡಿ. ಜಿ. ಜೋಷಿ ಮಾತನಾಡಿದರು. ಕಾ|| ನಿತ್ಯಾನಂದಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಸಭೆಯಲ್ಲಿ ಸಂಗ್ರಹಿಸಲಾದ ರೂ. 350 ಗಳನ್ನು ಧಾಳಿಗೊಳಗಾದ ಕುಟುಂಬಗಳ ಸಾಹಾಯಾರ್ಥವಾಗಿ ಕಳುಹಿಸಿಕೊಡಲಾಯ್ತು. ಕೊನೆಯಲ್ಲಿ ಕಾ|| ಜಯಾನಂದ ವಂದಿಸಿದರು. ಸಭೆಯಲ್ಲಿ ಸ್ವೀಕರಿಸಲಾದ ನಿರ್ಣಯದ ಪ್ರತಿಗಳನ್ನು ಪ್ರಧಾನ ಮಂತ್ರಿ ಹಾಗೂ ಪಶ್ಚಿಮ ಬಂಗಾಲದ ಮುಖ್ಯ ಮಂತ್ರಿಯವರಿಗೆ ಕಳುಹಿಸಲಾಯ್ತು.

ರೈತ ಸಂಘದ ಚಟುವಟಿಕೆಗಳು

ಸಿಂಧನೂರು

ಕರ್ನಾಟಕ ಪ್ರಾಂತ ರೈತ ಸಂಘದ ಸಿಂಧನೂರು ತಾಲೂಕು ಸಮಿತಿ ನೇತೃತ್ವದಲ್ಲಿ ಕೊಂಗನಹಟ್ಟಿ ಗ್ರಾಮದ ವಸತಿ ಇನ್ನಿತರ ಸಮಸ್ಯೆಗಳಿಗಾಗಿ ತಹಶೀಲ್ದಾರಕಾರ್ಯಾಲಯಕ್ಕೆಮತ್ತು ಬಿ.ಡಿ ಓ ಕಾರ್ಯಾಲಯಕ್ಕೆ ಅಕ್ಟೋಬರ್ 16 ರಂದು ನಿಯೋಗವು ಮನವಿ ಅರ್ಪಿಸಿದೆ. ಆರ್. ಡಿ. ಸಿ. ಸಿ. ಬ್ಯಾಂಕಿನ ಅವ್ಯವಹಾರವನ್ನು ಪ್ರತಿಭಟಿಸಿ ನಡೆದ ಹೋರಾಟಕ್ಕೆ ಬೆಂಬಲ ಸೂಚಿಸಿ 50 ಮಂದಿ ರೈತರು ಧರಣಿ ಮುಷ್ಕರದಲ್ಲಿ ಭಾಗವಹಿಸಿದರು. ಬ್ಯಾಂಕಿನ ಎದುರು ನಡೆದ ಬಹಿರಂಗ ಸಭೆಯಲ್ಲಿ ಕಾ. ಬಸವರಾಜಪ್ಪ ಮಾಲೀ ಪಾಟೀಲ್, ಕಾ. ಆದಪ್ಪ ನಾಯಕ ಮತ್ತು ಕಾ. ಬಿ. ಲಿಂಗಪ್ಪ ಅವರುಗಳು ಮಾತನಾಡಿ ಹೋರಾಟಕ್ಕೆ ಬೆಂಬಲ ಸೂಚಿಸಿದರು.

ಕುಷ್ಟಗಿ

ಕರ್ನಾಟಕಪ್ರಾಂತ ರೈತ ಸಂಘದ ಕುಷ್ಟಗಿ ತಾಲೂಕು ಸಮಿತಿಯ 600 ಕಾರ್ಯಕರ್ತರು ಅಕ್ಟೋಬರ್ 13ರಂದು ಮೆರವಣಿಗೆಯ ಮೂಲಕ ಸ್ಥಳೀಯ ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್ ತುಂಗಭದ್ರ ಗ್ರಾಮೀಣ ಬ್ಯಾಂಕ್‌ಗೆ ತೆರಳಿ ರೈತ ಹಾಗೂ ವಿದ್ಯಾವಂತ ನಿರುದ್ಯೋಗಿಗಳಿಗೆ ಉದ್ಯೋಗ ಒದಗಿಸಬೇಕೆಂಬ ಮನವಿಯನ್ನು ಅಲ್ಲಿನ ಅಧಿಕಾರಗಳಿಗೆ ಸಲ್ಲಿಸಿದ್ದಾರೆ.

ಆಳಂದ

ಗುಲ್ಬರ್ಗ ಜಿಲ್ಲೆಯ ಆಳಂದ ತಾಲೂಕಿನ ಸಲಗರ ಬಿ. ಕೆ, ಗ್ರಾಮದಲ್ಲಿ ಅಕ್ಟೋಬರ್ 18 ರಂದು ರೈತ ಸಂಘದ ಘಟಕವನ್ನು ಉದ್ಘಾಟಿಸಲಾಗಿದೆ. ಈ ಸಮಾರಂಭದಲ್ಲಿ ಕಾ.ಅರುಣಕುಮಾರ ಮನೋಹರ, ಕಾ. ಕಲ್ಲಪ್ಪ ಕಿರಣಗಿ ಮುಂತಾದವರು ಮುಖ್ಯ ಅಥಿತಿಗಳಾಗಿ ಭಾಗವಹಿಸಿದ್ದರು.

ಸಭೆಯಲ್ಲಿ ಕಾ. ವಿರಾಜ ವಿರವಿಟ್ಟೆ ಅಧ್ಯಕ್ಷರಾಗಿ, ಕಾ. ಮಲ್ಲಿಕಾರ್ಜುನಯ್ಯ ಕಾರ್ಯ ದರ್ಶಿಯಾಗಿ, ಕಾ. ಪಂಚಾಕ್ಷರೀ ಮಠ. ಕಾ. ಸಂಜಯ ಪಾಟೀಲ್ ಸಹ ಕಾರ್ಯ ದರ್ಶಿಗಳಾಗಿ ಕಾ. ಚಂದ್ರಕಾಂತ ಹೊಸದೊಡ್ಡಿ ಖಜಾಂಚಿಯಾಗಿ ಆಯ್ಕೆಯಾಗಿದ್ದಾರೆ. ಈ ಕಾರ್ಯಕ್ರಮಕ್ಕೆ ಸುತ್ತಮುತ್ತಲ ಹಳ್ಳಿಗಳಿಂದ ಸಾವಿರಾರು ರೈತರು ಭಾಗವಹಿಸಿದ್ದರೆಂದು ಪ್ರಕಟನೆ ತಿಳಿಸಿದೆ.

ಅಧ್ಯಾಪಕರ ಸಮ್ಮೇಳನ

ಕೇರಳದ ಸರ್ಕಾರೀ ಅಧ್ಯಾಪಕರ ಸಂಘದ ಮಂಜೇಶ್ವರ ಉಪ ಜಿಲ್ಲಾ ಸಮ್ಮೇಳನವು ನವೆಂಬರ್ 2 ರಂದು ಮಂಗಲಪ್ಪಾಡಿಯ ಸರ್ಕಾರೀ ಪ್ರೌಢ ಶಾಲೆಯಲ್ಲಿ ನಡೆಯಿತು. ಉಪಜಿಲ್ಲಾ ಅಧ್ಯಕ್ಷ ಕಾ. ಬಿ. ನಾರಾಯಣ ಶೆಟ್ಟಿಗಾರರ ಅಧ್ಯಕ್ಷತೆಯಲ್ಲಿ ನಡೆದ ಸಮ್ಮೇಳನವನ್ನು ಸಂಘದ ರಾಜ್ಯ ಸಮಿತಿ ಸದಸ್ಯ ಕಾ ಎನ್. ಕೆ. ಪ್ರಭಾಕರನ್ ಉದ್ಘಾಟಿಸಿದರು. ಸಮ್ಮೇಳನದಲ್ಲಿ 49 ಮಂದಿ ಪ್ರತಿನಿಧಿಗಳು ಭಾಗವಹಿಸಿದ್ದರು ಅದೇ ಸಂಜೆ ಬಂದಿಯೋಡಿನಲ್ಲಿ ಬಹಿರಂಗ ಸಭೆ ನಡೆಯಿತು. ಕಾ. ಬಿ. ಚಂದ್ರಪ್ಪ ಅಧ್ಯಕ್ಷತೆ ವಹಿಸಿದ್ದರು. ಕಾ. ಎಂ ಶ್ರೀನಿವಾಸರಾವ್ ಸ್ವಾಗತಿಸಿದರು. ಸಂಘದ ರಾಜ್ಯ ಸಮಿತಿ ಕಾರ್ಯದರ್ಶಿ ಕಾ. ಪಿ. ಬಾಲನ್. ಕಾ. ಬಿ. ನಾರಾಯಣಶೆಟ್ಟಿಗಾರ್ ಮುಂತಾದವರು ಸಭೆಯಲ್ಲಿ ಮಾತನಾಡಿದರು.

ಬಳ್ಳಾರಿ

ಬಳ್ಳಾರಿ ನಗರದಲ್ಲಿ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ನೂರಾರು ರೈತರು ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿ ಧರಣಿ ಸತ್ಯಾಗ್ರಹ ನಡೆಸಿದರು.

ಜನತೆಯನ್ನುದ್ದೇಶಿಸಿ ಜಿಲ್ಲಾ ಸಮಿತಿ ಸಹಕಾರ್ಯದರ್ಶಿ ಕಾಂ. ಯು. ಬಸವರಾಜ್ ಮಾತನಾಡಿ ಬೇಡಿಕೆಗಳನ್ನು ವಿವರಿಸಿದರಲ್ಲದೇ ಈ ಹೋರಾಟವನ್ನು ಇನ್ನೂ ಹೆಚ್ಚಿನ ಹಂತಕ್ಕೆ ಕೊಂಡೊಯ್ಯಬೇಕೆಂದು ಕರೆ ನೀಡಿದರು. ಡಿ. ವೈ. ಎಫ್. ಐ. ಯ. ಕಾಂ. ಸುರೇಶ್ ಕುಷ್ಟಗಿ ಬೆಂಬಲಿಸಿ ಮಾತನಾಡಿದರು.

ಸಿರುಗುಪ್ಪ

ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಸಿರುಗುಪ್ಪದಲ್ಲಿ ಸುಮಾರು 500 ಜನ ರೈತರು ಬೇಡಿಕೆಗಳ ಈಡೇರಿಕೆಗಾಗಿ ಮೆರವಣಿಗೆ ನಡೆಸಿದರು.

ಕಾರ್ಯದರ್ಶಿ ಕಾಂ. ಪಿ ಮಾರೆಪ್ಪನವರು ಸಭೆಯನ್ನುದ್ದೇಶಿಸಿ ಮಾತನಾಡಿದರು. ಕಾಂ. ರುದ್ರಗೌಡ, ಯಲ್ಲನಗೌಡ, ಯಲ್ಲಪ್ಪ ಹಾಗೂ ಆರ್. ಬಸವನಗೌಡ ಮೆರವಣಿಗೆ ನೇತೃತ್ವ ವಹಿಸಿದ್ದರು.

ಉತ್ಪಾದನಾ ಸಾಧನಗಳ ಆಧುನೀಕರಣ ಹಲವು ಮುಖಗಳು

ರಾಜೀವ ಗಾಂಧಿ ಸರ್ಕಾರದ ಹೊಸ ಆರ್ಥಿಕ ನೀತಿಯಲ್ಲಿ ಭಾರತವನ್ನು 21 ನೆಯ ಶತಮಾನಕ್ಕೆ ಒಯ್ಯಲು "ಆಧುನೀಕೀಕರಣ" ಬಹಳ ಮಹತ್ವಕೊಡಲಾಗಿದೆ. ಈ "ಆಧುನಿಕೀಕರಣ" ನಿಜವಾಗಿಯೂ ಗಣಕೀಕರಣ ಮತ್ತು ಸ್ವನಿಯಂತ್ರೀಕರಣಗಳಿಗೆ ಇನ್ನೊಂದುಹೆಸರು ಇದನ್ನೇ ಕೈಗಾರಿಕೆಯ ಪುನರ್ರೂಪಿಸುವಿಕೆ (Restucturing) ಎಂಬ ಹೆಸರಿನಲ್ಲೂ ಕರೆಯಲಾಗುತ್ತದೆ. ಗಣಕೀಕರಣ ಮತ್ತು ಸ್ವನಿಯಂತ್ರೀಕರಣದ ಉದ್ಯೋಗ ಭಕ್ಷಕ ಮತ್ತು ಇತರ ಆತಂಕಕಾರಿ ಪರಿಣಾಮಗಳು ಎಲ್ಲರಿಗೂ ತಿಳಿದಿದೆ. ಆದ್ದರಿಂದಲೇ ಇದನ್ನು ಇತರ ಆಕರ್ಷಕ ಹೆಸರುಗಳಿಂದ ಮರೆಮಾಚಲಾಗುತ್ತಿದೆ. ಆದ್ದರಿಂದ ನಮ್ಮ ದೇಶದ ವಿವಿಧ ಕೈಗಾರಿಕೆ ಮತ್ತು ವಾಣಿಜ್ಯ ಉದ್ಯಮಗಳಲ್ಲಿ ತರಬೇಕೆಂದಿರುವ ಗಣಕೀಕರಣ ಮತ್ತು ಸ್ವನಿಯಂತ್ರೀಕರಣದ ಸ್ವರೂಪವನ್ನು ಅರ್ಥಮಾಡಿಕೊಳ್ಳುವುದು ಅಗತ್ಯ.

ಹೆಚ್ಚಾಗಿ ಯಾಂತ್ರೀಕರಣ, ಗಣಕೀಕರಣ ಮತ್ತು ಸ್ವನಿಯಂತ್ರೀಕರಣವನ್ನು ಒಂದೇ ಅರ್ಥದಲ್ಲಿ ಉಪಯೋಗಿಸಲಾಗುತ್ತದೆ ಆದರೆ ಇವು ಉದ್ಯಮಗಳ ವಿವಿಧ ಕ್ಷೇತ್ರಗಳಲ್ಲಿ ಅನ್ವಯವಾಗುವ ಬೇರೆ ಬೇರೆ ಸಂಗತಿಗಳು. 1ನೆಯ ಯಾಂತ್ರೀಕರಣ ಮನುಷ್ಯನ ಕೈಗಳ ಬಲದ ಬದಲು ಯಾಂತ್ರಿಕ ಶಕ್ತಿಯ ಉಪಯೋಗ–ಭಾರೀ ಪ್ರಮಾಣದ ಮಣ್ಣು ತೆಗೆಯುವ ಅರ್ತ್ ಮೂವರ್ ಯಂತ್ರಗಳು, ಮರದ ಕೆಲಸ ಮಾಡುವ ಯಂತ್ರಗಳು. ಇತ್ಯಾದಿ ಇದಕ್ಕೆ ಉದಾಹರಣೆಗಳು. ಇಲ್ಲಿ ಮನುಷ್ಯನ ಸ್ನಾಯು ಬಲದ ಬದಲು ಪ್ರಾಕೃತಿಕ ಶಕ್ತಿಗಳನ್ನು (ತೈಲ, ಇದ್ದಲು, ವಿದ್ಯುತ್‌ಶಕ್ತಿ) ಉಪಯೋಗಿಸುವುದು ಮುಖ್ಯ ಅಂಶ. ಯಾಂತ್ರೀಕರಣ ಕೆಲವು ಸಂದರ್ಭಗಳಲ್ಲಿ ಅಪಾಯಕಾರಿ ಆಯಾಸಕಾರಿ, ಮೈಮುರಿಯುವ ಕೆಲಸಗಳನ್ನು ಸುಲಭಗೊಳಿಸುವುದರಿಂದ ಅನಿವಾರ್ಯ ಮತ್ತು ಕಾರ್ಮಿಕರ ಹಿತದಲ್ಲಿದೆ ಎಂದೆನಿಸಿದರೂ, ಇನ್ನೂ ಹಲವು ಸಂದರ್ಭಗಳಲ್ಲಿ ಭಾರಿ ಪ್ರಮಾಣದಲ್ಲಿ ಹಲವು ಉದ್ಯೋಗಗಳನ್ನು ಭಕ್ಷಿಸಬಲ್ಲುದು. ನಮ್ಮ ಹಲವು ದೊಡ್ಡ ಬಂದರುಗಳಲ್ಲಿ, ಗಣಿಗಳಲ್ಲಿ ಭಾರಿ ಪ್ರಮಾಣದ ಯಾಂತ್ರೀಕರಣ ನಡೆಸಲು ಸಿದ್ಧತೆ ನಡೆದಿದೆ. ಬಂದರುಗಳಲ್ಲಿ ಈಗಾಗಲೇ ಸ್ವಲ್ಪ ಮಟ್ಟದ ಯಾಂತ್ರೀಕರಣ ಇದ್ದು, ಯೋಜಿಸಲಾಗಿರುವ ಹೆಚ್ಚು ಕಡಿಮೆ ಸಂಪೂರ್ಣ ಯಾಂತ್ರೀಕರಣ ಅನಗತ್ಯ. ಗಣಿಗಳಲ್ಲಿ ಅಪಾಯಕಾರಿ ರಾಸಾಯನಿಕ ವಿಶ್ರಣಗಳಿಂದ ಮತ್ತು ಇತರ ಸುರಕ್ಷತೆಯ ದೃಷ್ಟಿಯಿಂದ ಸ್ವಲ್ಪ ಮಟ್ಟಿನ ಯಾಂತ್ರೀಕರಣ ಅಗತ್ಯವೆನಿಸಿದರೂ ಈಗ ಯೋಜಿಸಲಾಗುತ್ತಿರುವ ಯಾಂತ್ರೀಕರಣ ಈ ದೃಷ್ಟಿಯನ್ನು ಹೊಂದಿಲ್ಲ.

ಬಹಳಷ್ಟು ಸುದ್ದಿಯಾಗಿರುವುದು ಇತ್ತೀಚಿನ ದಿನಗಳಲ್ಲಿ ಗಣಕೀಕರಣ ಅಥವಾ ಕಂಪ್ಯೂಟರೀಕರಣದ ಬಗ್ಗೆ. ಕಂಪ್ಯೂಟರ್‌ಗಳು ಮುಖ್ಯವಾಗಿ ಮಾಹಿತಿಯನ್ನು ಸಂಸ್ಕರಿಸಿ ರೂಪಾಂತರ ಮಾಡುವ ಯಂತ್ರಗಳು ಇವುಗಳು ಒದಗಿಸುವ ಭಾರೀ ಪ್ರಮಾಣದ ಮಾಹಿತಿಯನ್ನು ಅತಿವೇಗವಾಗಿ ಸಂಸ್ಕರಿಸಬಲ್ಲವು. ಇಂದು ಲಭ್ಯವಿರುವ ನಾಲ್ಕನೇ ತಲೆಮಾರಿನ (Fourth Generation) ಕಂಪ್ಯೂಟರ್‌ಗಳ ವೇಗ ಮತ್ತು ಅಪಾರ ಸ್ಮರಣ ಶಕ್ತಿ (Meomry Capacity) ಹಿಂದಿನ ತಲೆಮಾರುಗಳಿಗಿಂತ ಹೆಚ್ಚು. ಕಂಪ್ಯೂಟರ್‌ಗಳ ಗಾತ್ರ (Size) ಖರ್ಚು ಮಾಡುವ ವಿದ್ಯುತ್ ಶಕ್ತಿ ಸಹ ಭಾರಿ ಪ್ರಮಾಣದಲ್ಲಿ ಕಡಿಮೆಯಾಗಿದೆ. ಎಲೆಕ್ಟ್ರಾನಿಕ್ ತಂತ್ರಜ್ಞಾನದ ಅಗಾಧ ಬೆಳವಣಿಗೆಯಿಂದಾಗಿ ಬೆಲೆ ಸಹ ತೀರಾ ಇಳಿದಿದೆ. ಸುಮಾರು ರೂ. 23,000 ದಿಂದ 30,000 ದ ಒಳಗೆ ಒಂದು ಸಣ್ಣ ಆಫೀಸನ್ನು ನಡೆಸಲು ಸಾಕಾಗುವಷ್ಟು ಸಾಮರ್ಥ್ಯದ ವಿವಿಧ ಉಪಯೋಗಗಳಿಗೆ ಬೇಕಾದ ಸಿದ್ಧ ಕಾರ್ಯಕ್ರಮ (Programe) ಗಳಿರುವ ಒಂದು ಸಣ್ಣ ಮೇಜಿನ ಮೇಲಿಡುವಷ್ಟು ಚಿಕ್ಕ ಗಾತ್ರದ ಕಂಪ್ಯೂಟರ್ ದೊರಕುತ್ತದೆ. ಈಗಾಗಲೇ ಹೇಳಿದಂತೆ ಎಲ್ಲೆಲ್ಲಿ ಮಾಹಿತಿಯ ಸಂಸ್ಕರಣದ ಅಗತ್ಯವಿದೆಯೋ ಅಲ್ಲೆಲ್ಲಾ ಕಂಪ್ಯೂಟರ್‌ಗಳ ಉಪಯೋಗ ಸಾಧ್ಯವಿದೆ ಮುಖ್ಯವಾಗಿ ನಮ್ಮ ದೇಶದಲ್ಲಿ ಆಫೀಸು ಕೆಲಸಗಳಿಗೆ ಈ ರೀತಿಯಲ್ಲಿ ಕಂಪ್ಯೂಟರ್ ಬಳಸುವ ಸಾಧ್ಯತೆ ಅತಿ ಹೆಚ್ಚಿದೆ ಮುಖ್ಯವಾಗಿ ಬ್ಯಾಂಕು, ವಿಮೆ ಮತ್ತು ಸರ್ಕಾರಿ ಆಫೀಸುಗಳಲ್ಲಿ ಈ ರೀತಿಯ ಕಂಪ್ಯೂಟರೀಕರಣ ಭಾರೀ ಪ್ರಮಾಣದಲ್ಲಿ ಯೋಜಿಸಲಾಗಿದೆ. ಇದು ಕ್ರಮೇಣ ಎಲ್ಲಾ ವಾಣಿಜ್ಯ ಉದ್ಯಮಗಳಿಗೆ ಹರಡುವ ಸಾಧ್ಯತೆ ಇದೆ. ಕಂಪ್ಯೂಟರೀಕರಣದ ಉದ್ದೇಶ ಬೆಳೆಯುತ್ತಿರುವ ಕಾರಕೂನರ ಉದ್ಯೋಗಾವಕಾಶಗಳನ್ನು ಮೊಟಕು ಮಾಡಿ, ಈ ವೆಚ್ಚವನ್ನು ಕಡಿಮೆ ಮಾಡುವುದು ಅಲ್ಲದೆ ಈ ಕ್ಷೇತ್ರಗಳಲ್ಲಿರುವ ಸುಸಂಘಟಿತ ಟ್ರೇಡ್ ಯೂನಿಯನ್‌ಗಳನ್ನು ಬಗ್ಗುಬಡಿಯುವುದೂ ಈ ಕ್ರಮದ ಉದ್ದೇಶ

ಬಳಕೆದಾರರಿಗೆ ಉತ್ತಮ ಸೇವೆ ಒದಗಿಸುವುದು ಕಂಪ್ಯೂಟರೀಕರಣದ ಉದ್ದೇಶ, ಬ್ಯಾಂಕಿನಲ್ಲಿ ಮೋಸ ಕಡಿಮೆ ಮಾಡುವುದು ಸಹ ಇದರಿಂದ ಸಾಧ್ಯವಾಗುತ್ತದೆ, ಎಂದೆಲ್ಲಾ ಸರ್ಕಾರ ಪ್ರಚಾರ ಮಾಡುತ್ತಿದೆ. ಸಾಮಾನ್ಯ ಬಳಕೆದಾರರಿಗೆ ಸೇವೆ ಉತ್ತಮ ಪಡಿಸುವುದಕ್ಕೆ ಕಂಪ್ಯೂಟರೀಕರಣ ಇಲ್ಲದೆಯೂ ಸಾಧ್ಯವಿದೆ ಕಂಪ್ಯೂಟರೀಕರಣವಾದಾಗಲೂ ಹಣಕಾಸಿನ ವಿಚಾರಗಳಲ್ಲಿ ಮೋಸ ಮಾಡುವುದು ಇದರ ತಂತ್ರಜ್ಞಾನ ಗೊತ್ತಿರುವವರಿಗೆ ಇನ್ನೂ ಸಾಧ್ಯವಿರುತ್ತದೆ. ನಿಜವಾಗಿಯೂ ಹೇಳಬೇಕಾದರೆ ಇದರ ಸಾಧ್ಯತೆ ಹೆಚ್ಚುತ್ತದೆ. ಹಾಗೂ ಯಾರೂ ಇದನ್ನು ಮಾಡಿದರು ಎಂದು ಪತ್ತೆ ಹಚ್ಚುವುದು ಇನ್ನೂ ಕಷ್ಟ.

ಕಂಪ್ಯೂಟರೀಕರಣವಾದ ನಂತರವೂ ಉದ್ಯೋಗ ಉಳಿಸಿಕೊಳ್ಳುವ ಉದ್ಯೋಗಿಗಳ ಕೆಲಸ ಹಿಂದಿನಕ್ಕಿಂತಲೂ ಯಾಂತ್ರಿಕವಾಗಿ ನೀರಸವಾಗಿರುತ್ತದೆ. ಕಂಪ್ಯೂಟರೀಕರಣ ಕಾರಕೂನರ ಆಫೀಸು ಕೆಲಸದಂತಹುವುಗಳಿಗೇ ಸೀಮಿತವಾಗಬೇಕಾಗಿಲ್ಲ. ವಿನ್ಯಾಸದಲ್ಲಿ ಕಂಪ್ಯೂಟರ್‌ನ ಬಳಕೆ ಇಂಜಿನೀಯರುಗಳ ಉದ್ಯೋಗ ಕಬಳಿಸಬಲ್ಲುದು. ದೂರ ಸಂಪರ್ಕ ಮಾಧ್ಯಮಗಳಿಂದ (ಟೆಲಿಫೋನ್ ಇತ್ಯಾದಿ) ಜೋಡಿಸಲ್ಪಟ್ಟ ಕಂಪ್ಯೂಟರ್‌ಗಳ ಜಾಲ (Net Work) ದೇಶದಲ್ಲಿ ಹರಡಿರುವ ಉದ್ಯಮಗಳಿಗೆ ಕಂಪ್ಯೂಟರೀಕರಣದಲ್ಲಿ ಇನ್ನೊಂದು ಹಂತ ಇಂತಹ ಜಾಲ ಅತ್ಯಂತ ಕೇಂದ್ರೀಕೃತ ನಿಯಂತ್ರಣವನ್ನು ಗಟ್ಟಿಗೊಳಿಸುತ್ತದೆ. ಪೋಲೀಸಿನಂತಹ ಸರ್ಕಾರಿ ಅಂಗಗಳ ದಮನಕಾರಿ ಕಾರ್ಯಗಳಿಗೆ ಇಂತಹ ಕಂಪ್ಯೂಟರ್ ಜಾಲಗಳು ವರವಾಗಬಲ್ಲವು.

ಸ್ವನಿಯಂತ್ರೀಕರಣ (Automation) ಯಾಂತ್ರೀಕರಣ ಮತ್ತು ಕಂಪ್ಯೂಟರೀಕರಣದ ಮೊತ್ತ ಎನ್ನಬಹುದು ಯಂತ್ರಗಳನ್ನು ನಿಯಂತ್ರಿಸುವ ಕಾರ್ಮಿಕನ ಪಾತ್ರವನ್ನು ಬಹಳ ಮಟ್ಟಿಗೆ ಇಲೆಕ್ಟ್ರಿಕಲ್, ಇಲೆಕ್ಟ್ರಾನಿಕ್ ಅಥವಾ ಕಂಪ್ಯೂಟರ್ ನಿಯಂತ್ರಕಗಳು (Controller) ವಹಿಸುವುದಕ್ಕೆ ಸ್ವನಿಯಂತ್ರೀಕರಣ ಎನ್ನಬಹುದು. ಹೆಚ್ಚಿನ ಕೆಲಸಗಳಲ್ಲಿ ಸಂಪೂರ್ಣ ನಿಯಂತ್ರೀಕರಣ ಅಸಾಧ್ಯ ಅಥವಾ ವಿಪರೀತ ದುಬಾರಿ, ನಿಯಂತ್ರಕದ ಕಾರ್ಯವ್ಯಾಪ್ತಿ, ಸಾಮರ್ಥ್ಯ ಮತ್ತು ಕಾರ್ಮಿಕನ ಮಧ್ಯ ಪ್ರವೇಶದ ಅಗತ್ಯತೆಯ ಅವಧಿ, ರೀತಿಯ ಆಧಾರದ ಮೇಲೆ ಸ್ವನಿಯಂತ್ರಣದ ಹಲವು ಹಂತಗಳನ್ನು ಗುರುತಿಸಬಹುದು.

(6 ನೇ ಪುಟ ನೋಡಿ)

ಆಧುನೀಕರಣ, ಗಣಕೀಕರಣ, ಆಟೋಮೇಷನ್ ಈಗ ಭಾರತದ ಸಂಘಟಿತ ಕಾರ್ಮಿಕ ಆಂದೋಲನ ಎದುರಿಸುತ್ತಿರುವ ಒಂದು ದೊಡ್ಡ ಸವಾಲು. ಭಾರತದಂತಹ ದೇಶದಲ್ಲಿ ಆಧುನೀಕರಣ, ಗಣಕೀಕರಣ ಇತ್ಯಾದಿ ಏಕೆ, ಹೇಗೆ ಜನಸಾಮಾನ್ಯರ, ದೇಶದ ಹಿತಾಸಕ್ತಿಗಳಿಗೆ ವಿರೋಧವಾಗಿದೆ ಇದಕ್ಕೆ ಪರ್ಯಾಯವೇನು ಎಂಬುದರ ಸ್ಥೂಲ ಚಿತ್ರ ನೀಡುತ್ತವೆ ಈ ಪುಟಗಳು.

ಹೊಸ ಶಿಕ್ಷಣ ನೀತಿ–ಹೊಸ ಕಂಪ್ಯೂಟರ್ ನೀತಿ.

ರಾಜೀವ ಗಾಂಧಿಯ ಸರ್ಕಾರದ ಹೊಸ ಕಂಪ್ಯೂಟರ್ ನೀತಿ ಎರಡು–ವಲಯಗಳ ನೀತಿ ಎಂದು ಹೇಳಲಾಗುತ್ತಿದೆ. ಅಂದರೆ ಬೂರ್ಜ್ವಾ ವರ್ಗದ ಹಿತಾಸಕ್ತಿ, ಸೌಲಭ್ಯಗಳಷ್ಟೇ ಸೀಮಿತವಾದ, ಜಗತ್ತಿನ ಅತ್ಯುಚ್ಚ ತಂತ್ರಜ್ಞಾನ ಬಳಸುವ ಅತ್ಯಂತ ದಕ್ಷತೆಯಿಂದ ಕೂಡಿದ ಒಂದು ವಲಯ ; ಇನ್ನೊಂದು ವಿಶಾಲ ಜನಸ್ತೋಮಕ್ಕೆ ಯಾವ ದಕ್ಷತೆಯೂ ಬೇಕಾಗಿರದ ವಲಯ ! ಈ ದ್ವಿವಲಯ ನೀತಿಗೆ ಪೂರಕವಾದದ್ದು ಹೊಸ ಶಿಕ್ಷಣ ನೀತಿ. ಆದ್ದರಿಂದ ಸಾರ್ವತ್ರಿಕ ಶಿಕ್ಷಣದ ಧ್ಯೇಯಕ್ಕೆ ತಿಲಾಂಜಲಿಯನ್ನಿತ್ತು ಮೇಲೆ ಹೇಳಿದ ಅತ್ಯಂತ ದಕ್ಷ ವಲಯಕ್ಕೆ ಬೇಕಾದ ಸೀಮಿತ ಸಂಖ್ಯೆಯ ಸಿಬ್ಬಂದಿ ತಯಾರಿಸುವ ಕಂಪ್ಯೂಟರ್‌ಗಳಿಂದ ಸಜ್ಜಿತವಾದ 'ಮಾದರಿ' ನವೋದಯ ಶಾಲೆಗಳು, ಉಳಿದ ಅಪಾರ ಸಂಖ್ಯೆಯ ಮಕ್ಕಳಿಗೆ ಅಲ್ಪ–ಸ್ವಲ್ಪ ಅಕ್ಷರ ಜ್ಞಾನ ಕೊಡುವ ಕರಿಹಲಗೆ, ಬೆಂಚುಗಳಿಗೂ ಗತಿಯಿಲ್ಲದ ಶಾಲೆಯೆನಿಸಿಕೊಳ್ಳುವ ದೊಡ್ಡಿಗಳು. ವಿದ್ಯಾವಂತರೇ ಇಲ್ಲದಿದ್ದರೆ ವಿದ್ಯಾವಂತ ನಿರುದ್ಯೋಗಿಗಳ ಸಮಸ್ಯೆಯೇ ಇಲ್ಲ.

ಸ್ವಾವಲಂಬನೆಯನ್ನು ಗಾಳಿಗೆ ತೂರಿದ ನೀತಿ

ಇವೆರಡೂ ನೀತಿಗಳು ಆಧುನಿಕೀಕರಣವನ್ನು ಗಮನದಲ್ಲಿಟ್ಟುಕೊಂಡು ರೂಪಿಸಲಾಗಿದೆ. ಈ ಹಿಂದೆ ಪದೇ (ಹೆಚ್ಚಾಗಿ ಅರ್ಥವಿಲ್ಲದೆ) ಹೇಳುತ್ತಿದ್ದ ಸ್ವಾವಲಂಬನೆ, ಆಮದಿಗೆ ಬದಲಿ ವ್ಯವಸ್ಥೆ ಇತ್ಯಾದಿ ಉದ್ದೇಶಗಳನ್ನು ಗಾಳಿಗೆ ತೂರಲಾಗಿದೆ. ಇಲೆಕ್ಟ್ರಾನಿಕ್ಸ್ ಉಪಕರಣಗಳನ್ನು ಅಂತರಾಷ್ಟ್ರೀಯ ಬೆಲೆಯಲ್ಲಿ ಗ್ರಾಹಕರಿಗೆ ಒದಗಿಸುವುದು ಮತ್ತು ಆದಷ್ಟು ರಫ್ತು ಹೆಚ್ಚಿಸುವುದಷ್ಟೇ ಹೊಸ ಇಲೆಕ್ಟ್ರಾನಿಕ್ಸ್ ನೀತಿಯ ಮೂಲ ಉದ್ದೇಶ. ಕಂಪ್ಯೂಟರ್ ಕೈಗಾರಿಕೆಯ ಹಿತರಕ್ಷಣೆಯ ಬದಲು ಕಂಪ್ಯೂಟರೀಕರಣವನ್ನು ಏನಕೇನ ಪ್ರಕಾರೇಣ ಸಾಧಿಸುವುದು ದೇಶದ ಕಂಪ್ಯೂಟರ್ ನೀತಿಯ ಉದ್ಯಮ 133 ಕೋಟಿಯಷ್ಟು ಉತ್ಪಾದನೆ ಸಾಧಿಸಿದ್ದರೂ ಇದರಲ್ಲಿ ಆಮದಿನ ಮೌಲ್ಯಾಂಶ 75./. ಇರುತ್ತದೆ. ಇದಲ್ಲದೆ ಸುಮಾರು 50 ಕೋಟಿ ರೂ.ಗಳಷ್ಟು ನೇರವಾಗಿ ಆಮದಾಗುತ್ತವೆ. ಜವಳಿ, ರಾಸಾಯನಿಕ, ಇಂಜಿನೀಯರಿಂಗ್ ಉದ್ಯಮಗಳಲ್ಲಿ ಉಪಯೋಗಿಸುವ ಸ್ವನಿಯಂತ್ರೀಕರಣಕ್ಕೆ ಯಂತ್ರಗಳನ್ನು ಆಮದಿಸಲು ಇದ್ದ ಕಟ್ಟುಪಾಡುಗಳನ್ನು ಬಹಳಷ್ಟು ಮಟ್ಟಿಗೆ ಸಡಿಲಿಸಲಾಗಿದೆ. ಆದ್ದರಿಂದ ರಾಜೀವ್ ಮಾದರಿಯ ಆಧುನಿಕೀಕರಣ ಹೆಚ್ಚು ಕಡಿಮೆ ಪೂರ್ಣವಾಗಿ ಆಮದಿನ ಮೇಲೆ ಆಧಾರಿತವಾಗಿದೆ. ಸ್ವದೇಶಿ ಕೈಗಾರಿಕೆಗಳಿಗೆ ಕೊಡಲಿ ಏಟು ಕೊಡುತ್ತವೆ. ಈ ನೀತಿ–ಮುಖ್ಯವಾಗಿ ಅಂತರಾಷ್ಟ್ರೀಯ ಪೈಪೋಟಿಗೆ ದೇಶದ ಬಾಲ್ಯಾವಸ್ಥೆಯಲ್ಲಿರುವ ಕೈಗಾರಿಕೆಯನ್ನು ಒಡ್ಡುವುದು.

ಗಣಕಯಂತ್ರ-ಉದ್ಯೋಗ ಭಕ್ಷಕ

ರಾಜೀವ ಗಾಂಧಿಯವರು ಈ ದೇಶದ ಪ್ರಧಾನಿಯಾದಾಗಿನಿಂದ ಗಣಕಯಂತ್ರಗಳನ್ನು ದೊಡ್ಡ ರೀತಿಯಿಂದ ತರಬೇಕೆಂದೂ ಆಧುನಿಕ ಜಗತ್ತಿನಲ್ಲಿ ಭಾರತಕ್ಕೆ ಸ್ಥಾನ ಸಿಗಬೇಕಾದರೆ ಹಾಗೂ 21 ನೇ ಶತಮಾನದತ್ತ ಮುನ್ನಡೆಯಬೇಕಾದರೆ, ಗಣಕ ಯಂತ್ರಗಳನ್ನು ಉಪಯೋಗಿಸದೇ ಇರುವುದು, ಪ್ರಗತಿಯ ಹಾದಿಯಲ್ಲಿ ಕಳಚಿಕೊಂಡ ಕೊಂಡಿಯೆಂದು ವಾದಿಸುತ್ತಿದ್ದಾರೆ.

19 ನೇ ನವಂಬರ್ 1984 ರಂದು ಹೊಸದಾಗಿ ತಂದ ಗಣಕ ಯಂತ್ರಗಳ ನೀತಿ, ಕಳೆದ ವರ್ಷದ ಮುಂಗಡ ಪತ್ರದಲ್ಲಿ ತೋರಿಸಿದ ರಿಯಾಯಿತಿಗಳು ಹಾಗೂ 23-3-85 ರಂದು ತಂದ ಎಲೆಕ್ಟ್ರಾನಿಕ್ಸ್ ನೀತಿ ಹಾಗೂ 12-4-85 ರಂದು ತಂದ ಆಯಾತ ನಿರ್ಯಾತ ನೀತಿಯಲ್ಲಿ ಗಣಕ ಯಂತ್ರಗಳನ್ನು ದೊಡ್ಡ ರೀತಿಯಲ್ಲಿ ಈ ದೇಶದಲ್ಲಿ ಉಪಯೋಗಿಸುವ ಸನ್ನಾಹ ನಡೆಸಿದ್ದಾರೆ.

ಮಧ್ಯಮ ವರ್ಗದ ಕೆಲವು ವಿಭಾಗಗಳಲ್ಲಿ ರಾಜೀವ ಗಾಂಧಿಯವರ ಈ ವಿಚಾರ ಧಾರೆ ದೊಡ್ಡ ಭ್ರಮೆಯನ್ನು ಹುಟ್ಟಿಸಿದೆ.

ಆದರೆ ಭಾರತದಂತಹ ಹಿಂದುಳಿದ ದೇಶದಲ್ಲಿ ಗಣಕೀಕರಣದ ಈ ನೀತಿಯು ಜನಜೀವನದ ಮೇಲೆ ಭಾರಿ ದುಷ್ಪರಿಣಾಮ ಬೀರಲಿದೆ. ಈಗಾಗಲೇ ಸುಮಾರು 1.25 ಕೋಟಿ ವಿದ್ಯಾವಂತ ನಿರುದ್ಯೋಗಿಗಳು ದೇಶದಲ್ಲಿದ್ದಾರೆ ಸುಮಾರು 5 ಕೋಟಿ ಜನ ನಿರುದ್ಯೋಗಿ 1981 ರ ಗಣತಿ ಪ್ರಕಾರ ಇದ್ದಾರೆ. ಡಿಲ್ಲಿ ವಲಯಗಳ ಪ್ರಕಾರ ಸುಮಾರು 12 ಕೋಟಿ ಜನರಿಗೆ ಕೆಲಸವಿರುವುದಿಲ್ಲ. ಆದ್ದರಿಂದ ನಮ್ಮ ಯಾವುದೇ ಯೋಜನೆಯು ಈ ಜನಗಳಿಗೆ ಕೆಲಸ ಒದಗಿಸುವುದನ್ನು ಹಾಗೂ ಆ ಮೂಲಕ ಕೊಳ್ಳುವ ಶಕ್ತಿಯನ್ನು ಉಂಟು ಮಾಡುವ ಉದ್ದೇಶ ಹೊಂದಿರಬೇಕು. ಆದರೆ ಜನರ ಅನುಭವದಲ್ಲಿ ವರ್ಷದಿಂದ ವರ್ಷಕ್ಕೆ ನಿರುದ್ಯೋಗ ಹೆಚ್ಚುತ್ತಿದೆ. 7 ನೇ ಯೋಜನೆಯಲ್ಲಿಯೂ ಉದ್ಯೋಗ ದೊರಕಿಸುವ ಯಾವ ಸೂಚನೆಯೂ ಇಲ್ಲ, ಬದಲು ಹಾಲಿ ಇರುವ ಉದ್ಯಮಗಳಲ್ಲಿ ಯಾಂತ್ರೀಕರಣ ಹಾಗೂ ಗಣಕೀಕರಣವನ್ನು ಹೆಚ್ಚಾಗಿ ಉಪಯೋಗಿಸುವ ಉದ್ದೇಶವಿದೆ.

ಪರಿಣಾಮವಾಗಿ ಲಕ್ಷಾಂತರ ಜನ ಕೆಲಸ ಕಳೆದು ಕೊಳ್ಳುವ ಸಾಧ್ಯತೆ ಇದೆ. ಈಗಾಗಲೇ ಅಂಚೆ ಮತ್ತು ತಂತಿ ಇಲಾಖೆಯಲ್ಲಿ 3 ಲಕ್ಷ ಉದ್ಯೋಗಿಗಳು, ರೈಲ್ವೆಯಲ್ಲಿ 5 ಲಕ್ಷ ಉದ್ಯೋಗಿಗಳು, ಹಣಕಾಸು ಸಂಸ್ಥೆಗಳಾದ ಬ್ಯಾಂಕ್, ಎಲ್.ಐ.ಸಿ ಗಳಲ್ಲಿ 1 ಲಕ್ಷ ಉದ್ಯೋಗಿಗಳು, ಗಿರಣಿ ಕೈಗಾರಿಕೆಗಳಲ್ಲಿ 10 ಲಕ್ಷ ಹೆಚ್ಚು ಉದ್ಯೋಗಿಗಳಿಗೆ ಉದ್ಯೋಗದ ಬಾಗಿಲು ಮುಚ್ಚಿದೆ. ಹಾಗೂ ಕೆಲಸ ಕಳೆದು ಕೊಂಡಿದ್ದಾರೆ. ಹೊಸ ಗಿರಣಿ ನೀತಿಯ ಪರಿಣಾಮವಾಗಿ 3 ಕೋಟಿಗೂ ಹೆಚ್ಚು ಕೈಮಗ್ಗಗಳಲ್ಲಿ ಕೆಲಸ ಮಾಡುವ ಕಾರ್ಮಿಕರು ಕೆಲಸ ಕೊಳ್ಳುವ ಸಾಧ್ಯತೆ ಇದೆ.

ರಾಜೀವ ಗಾಂಧಿಯವರ ಹೊಸ ತಾಂತ್ರಿಕ ನೀತಿಯು ಉದ್ಯೋಗ ಸೃಷ್ಟಿಸುವ ಉದ್ಯಮಗಳ ಬದಲು ಹೆಚ್ಚು ಬಂಡವಾಳ ಶೇಖರಣೆಯ ಉದ್ಯಮಗಳತ್ತ ಗಮನ ಕೊಟ್ಟಿದೆ. ಪರಿಣಾಮವಾಗಿ ಜನರಿಗೆ ಕೆಲಸ ಸಿಗುವ ಸಾಧ್ಯತೆಗಳೇ ಇಲ್ಲವಾಗಿದೆ. ಈಗಾಗಲೇ ನಿರುದ್ಯೋಗದ ಪರಿಸ್ಥಿತಿ ಎಷ್ಟು ಉಲ್ಬಣವಾಗಿದೆಯೆಂದರೆ ದಿನಗೂಲಿ ಮೇಲೆ ಕೆಲಸ ಮಾಡಲು ಇಂಜಿನಿಯರುಗಳು ಪೈಪೋಟಿ ನಡೆಸಿದ್ದಾರೆ.

ರಾಜೀವ ಗಾಂಧಿಯವರಿಗೆ ಮೇಲ್ಕಂಡ ವಿಷಯಗಳೇನು ಗೊತ್ತಿಲ್ಲವೆಂದಲ್ಲ ಆದರೆ ಅವರನ್ನು ನಿರ್ದೇಶಿಸುವ ಜನ ಬೇರೆಯವರಿದ್ದಾರೆ. ಅಭಿವೃದ್ಧಿಯ ಸೋಗಿನಲ್ಲಿ ಈ ದೇಶದ ಹಿರಿಯ ಬಂಡವಾಳಶಾಹಿಯನ್ನು ಬಲಪಡಿಸಲು ಹೊರಟಿರುವ ಕಾಂಗ್ರೆಸ್ಸಿಗರು ವಿಶ್ವ ಬ್ಯಾಂಕಿನಿಂದ ಪಡೆದ ಸಾಲಗಳನ್ನು ಹಿಂತಿರುಗಿಸಲಾಗದೆ ಆದೇಶ ನೀಡುವ ಷರತ್ತುಗಳನ್ನು ಒಪ್ಪಿ ದೇಶದಲ್ಲಿ ನಡೆಸುವ ಉದ್ಯಮಗಳು ಹೆಚ್ಚು ಲಾಭದಾಯಕವಾಗಬೇಕಾದರೆ ಹಾಗೂ ಅವರ ಸಾಲಗಳನ್ನು ಹಿಂತಿರುಗಿಸಬೇಕಾದರೆ ಆಧುನೀಕರಣ, ಗಣಕೀಕರಣ, ಹಾಗೂ ಯಾಂತ್ರಿಕರಣವನ್ನು ತಂದು ಕೆಲಸಗಾರರನ್ನೂ ಕಡಿಮೆ ಗೊಳಿಸಿ ಲಾಭ ಹೆಚ್ಚು ಮಾಡಿಕೊಳ್ಳಬೇಕಾಗಿದೆಯಾದ್ದರಿಂದ ದೇಶದ ಪ್ರಗತಿಯೆಂದೂ ಈ ಗಣಕೀಕರಣದ ಉದ್ದೇಶವಲ್ಲ.

ಅಂದರೆ ಕ್ರಮೇಣ ನಮ್ಮ ದೇಶದ ಆಡಳಿತ ಸೂತ್ರವನ್ನು ವಿಶ್ವ ಬ್ಯಾಂಕ್ ನಡೆಸುವುದೆಂದರ್ಥ. ವಿಶ್ವ ಬ್ಯಾಂಕ್ ಅಮೇರಿಕಾ ಸಾಮ್ರಾಜ್ಯಶಾಹಿ ನಡೆಸುವ ಒಂದು ಅಂತರ್‍ರಾಷ್ಟ್ರೀಯ ಹಣಕಾಸಿನ ಸಂಸ್ಥೆಯಾಗಿದೆ. ಒಂದು ಅಧ್ಯಯನದ ಪ್ರಕಾರ 1980 ರಲ್ಲಿ 2,50,000 ಕೋಟಿ ರೂ, ಅಷ್ಟು ಎಲೆಕ್ಟ್ರಾನಿಕ್ ಉತ್ಪನ್ನವಿದ್ದರೆ 1990 ರ ಹೊತ್ತಿಗೆ 7,40,000 ಕೋಟಿ ರೂ. ಉತ್ಪನ್ನ ಮಾಡುವ ಯೋಜನೆಯನ್ನು ಅಮೇರಿಕಾ ಹಾಗೂ ಅದರ ಮಿತ್ರ ದೇಶಗಳು ಮಾಡಿವೆ. ಇದರ ಪೈಕಿ 3, 50, 000 ಕೋಟಿ ರೂ ಉತ್ಪನ್ನಗಳನ್ನು ಮೂರನೇ ಜಗತ್ತಿನ ಭಾರತದಂತಹ ಹಿಂದುಳಿದ ದೇಶಗಳ ಮೇಲೆ ಹೇರಲು ವಿಶ್ವ ಬ್ಯಾಂಕನ್ನು ಹಣ ಕೊಡುವ ನೆಪದಲ್ಲಿ ಉಪಯೋಗಿಸಲಾಗುತ್ತಿದೆ. ರಾಜೀವರ ತರಾತುರಿ ಈಗ ಸುಸ್ಪಷ್ಟವಾಯಿತಲ್ಲವೇ !

ಸಂಘಟಿತ ಕಾರ್ಮಿಕ ಆಂದೋಲನವೇ ಕಾಪಾಡಬೇಕು !

ಯೋಜನಾ ಆಯೋಗದ ಅಂದಾಜಿನ ಪ್ರಕಾರ 1985-90 ರ ಅವಧಿಯಲ್ಲಿ ವಿದ್ಯಾವಂತ ಉದ್ಯೋಗಾರ್ಥಿಗಳ ಸಂಖ್ಯೆ 1 ಕೋಟಿ 6 ಲಕ್ಷವಾಗಬಹುದು. 1985 ರ ಆರಂಭದಲ್ಲಿ ಉದ್ಯೋಗ ಪಡೆಯಲು ವಿಫಲರಾಗಿದ್ದ ವಿದ್ಯಾವಂತರ ಸಂಖ್ಯೆ 47 ಲಕ್ಷ. ಅಂದರೆ ಏಳನೇ ಯೋಜನೆಯ ಅವಧಿಯಲ್ಲಿ ನಿರುದ್ಯೋಗದ ಪರಿಸ್ಥಿತಿ ಆರನೇ ಯೋಜನೆಯ ಮಟ್ಟದಲ್ಲಾದರೂ ಉಳಿಯಬೇಕಾದರೆ ಒಟ್ಟು 94 ಲಕ್ಷ ಉದ್ಯೋಗಾವಕಾಶಗಳನ್ನು ಕಲ್ಪಿಸಬೇಕಾಗಿದೆ ಎಂದು ಯೋಜನಾ ಆಯೋಗವೇ ಲೆಕ್ಕ ಹಾಕಿದೆ. ಇವರಿಗೆಲ್ಲಾ ಉದ್ಯೋಗ ಎಲ್ಲಿ ಸಿಗಬೇಕು ? ಯೋಜನಾ ಆಯೋಗದ ಪ್ರಕಾರ "ಪ್ರಮುಖವಾಗಿ ಕೈಗಾರಿಕೆಗಳು, ಬ್ಯಾಂಕುಗಳು, ಸಾರಿಗೆ, ಸಂಪರ್ಕ ಹಾಗೂ ಸಾರ್ವಜನಿಕ ಸೇವೆಗಳಲ್ಲಿ" ಅಂದರೆ ಕುಸಿದು ಬೀಳುತ್ತಿರುವ ಹಳೆಯ ಉದ್ಯಮ್ಯಗಳಲ್ಲಿ, ಸಾವಿರಾರು ಸಂಖ್ಯೆಯಲ್ಲಿ ಉದ್ಯೋಗಾವಕಾಶ ಮೊಟಕುಗೊಳಿಸುವ ಆಧುನಿಕೃತ ಹೊಸ ಉದ್ಯಮಗಳಲ್ಲಿ ಮತ್ತು ಕಂಪ್ಯೂಟರೀಕರಣದ ಮೂಲಕ ದಶಸಹಸ್ರಗಟ್ಟಲೆ ಸಂಖ್ಯೆಯಲ್ಲಿ ಉದ್ಯೋಗಾವಕಾಶಗಳನ್ನು ಕೊಲ್ಲುತ್ತಿರುವ ಬ್ಯಾಂಕಿಂಗ್, ದೂರ ಸಂಪರ್ಕ ಇತ್ಯಾಧಿಗಳಲ್ಲಿ ! ಭಾರೀ ಪ್ರಮಾಣದ ಗಣಕೀಕರಣದ ಮೊದಲೂ ಕೂಡಾ ವರ್ಷಕ್ಕೆ ಕೇವಲ 8 ಲಕ್ಷದಷ್ಟು ಉದ್ಯೋಗಗಳನ್ನು (ಯೋಜನಾ ಆಯೋಗದ ಪ್ರಕಾರವೇ) ಸೃಷ್ಟಿಸುತ್ತಿದ್ದ ಸಂಘಟಿತ ಉದ್ಯಮಗಳಲ್ಲಿ ಭಾರತದ ಯುವಕ ವಿದ್ಯಾವಂತ ನಿರುದ್ಯೋಗಿಗಳನ್ನು ಕಾಪಾಡುವವರು ಯಾರು ?

ದುಡಿಮೆಯ ಹಕ್ಕು ದೊರೆತಾಗ ಮಾತ್ರವೇ....

ಗಣಕೀಕರಣದ ಧೋರಣೆ ನೌಕರ-ವಿರೋಧಿ ಮತ್ತು ಕಾರ್ಮಿಕ ವರ್ಗ-ವಿರೋಧಿ ಧೋರಣೆ ಮಾತ್ರವೇ ಅಲ್ಲ, ಅದು ದೇಶದ ಹಾಗೂ ಜನತೆಯ ಹಿತಕ್ಕೂ ವಿರುದ್ಧವಾದದ್ದು. ನಿರುದ್ಯೋಗವನ್ನು, ಜನಸಾಮಾನ್ಯರ ಸಂಕಷ್ಟಗಳನ್ನು ಉಲ್ಬಣಗೊಳಿಸಿ ರಾಷ್ಟ್ರೀಯ ಹಿತಾಸಕ್ತಿಗಳನ್ನು ನಮ್ಮ ಆರ್ಥಿಕ ವ್ಯವಸ್ಥೆಯ ಹಿತವನ್ನು ರಕ್ಷಿಸುವುದು ಸಾಧ್ಯವಿಲ್ಲ ನಿರುದ್ಯೋಗದ ಸಮಸ್ಯೆಯತ್ತ ನಮ್ಮ ಶ್ರಮದ ಸಂಪನ್ಮೂಲಗಳ ಉತ್ಪಾದನಾ ಸಾಮರ್ಥ್ಯದ ಬಳಕೆಯಾಗದೇ ಇರುವುದರತ್ತ ಸೂಕ್ತ ಗಮನ ಹರಿಸದೆ ಪ್ರಗತಿ ಸಾಧ್ಯವಾಗುವುದಿಲ್ಲ. ದುಡಿಮೆಯ ಹಕ್ಕನ್ನು ನಮ್ಮ ಸಂವಿಧಾನದಲ್ಲಿ ಮೂಲಭೂತ ಹಕ್ಕನ್ನಾಗಿ ಮಾಡಬೇಕು ಮತ್ತು ಇದರ ಸುತ್ತಲು ಸಕಲ ಯೋಜನೆ, ಸಕಲ ಯೋಜಿತ ಪ್ರಯತ್ನಗಳು ಹಾಗೂ ರಾಷ್ಟ್ರೀಯ ಮುನ್ನಡೆಯ ಎಲ್ಲಾ ಧೋರಣೆಗಳೂ ಇರಬೇಕು. ದುಡಿಮೆಯ ಹಕ್ಕಿನ ಬೆಂಬಲದೊಂದಿಗೆ ಜನತೆಯ ಹಿತಾಸಕ್ತಿಗಳನ್ನು ಪ್ರತಿನಿಧಿಸುವ ಒಂದು ಯೋಜನಾ ಸಮಿತಿ ಆಧುನಿಕರಣವನ್ನು ದೇಶದ ಹಿತಾಸಕ್ತಿಗನುಗುಣವಾಗಿ ಎಲ್ಲಿ, ಹೇಗೆ ಆರಂಭಿಸಬೇಕೆಂಬುದನ್ನು ನಿರ್ಧರಿಸುವಂತಾಗಬೇಕು. ಇದರಿಂದ ಎಲ್ಲಿ ರಾಷ್ಟ್ರದ ಮುನ್ನಡೆಗೆ ಅತ್ಯಗತ್ಯವೋ ಅಲ್ಲಿ ಈ ಪ್ರಕ್ರಿಯೆಯನ್ನು ಆರಂಭಿಸಿ ಖಾಸಗಿ ಲಾಭಕ್ಕಾಗಿ ಅವನ್ನು ಆರಂಭಿಸದಂತೆ ನೋಡಿಕೊಳ್ಳಲು ಹಾಗೂ ಉದ್ಯೋಗ ಪರಿಸ್ಥಿತಿಯಲ್ಲಿ ಅನಗತ್ಯ ತೊಂದರೆಯಾಗದಂತೆ ಮತ್ತು ಉತ್ಪಾದನೆಯ ಮುನ್ನಡೆಯ ಲಾಭ ಜನರಿಗೆ ಸಿಗುವಂತೆ ಮಾಡಲು ಸಾಧ್ಯವಾಗುತ್ತದೆ.

ಬಿ. ಟಿ. ರಣದಿವೆ.

ಭಾರತದಲ್ಲಿ ಈಗ 3000 ಕಂಪ್ಯೂಟರ್‌ಗಳಿದ್ದಾಗಲೇ ಸುಮಾರು 12 ಕೋಟಿ ಜನರಿಗೆ ಕೆಲಸವಿಲ್ಲ. 1990 ರ ಹೊತ್ತಿಗೆ 1.50,000 ಕಂಪ್ಯೂಟರ್‌ಗಳು ಯೋಜನೆಯ ಪ್ರಕಾರವೆಂದರೆ ನಿರುದ್ಯೋಗದ ಪರಿಸ್ಥಿತಿ ಊಹಿಸಲ ಸಾಧ್ಯ.

ಮುಂದುವರಿದ ದೇಶಗಳಲ್ಲಿ ನಿರುದ್ಯೋಗಿಗಳಿಗೆ ಸುಮಾರಾದ ನಿರುದ್ಯೋಗ ಭತ್ತೆಯನ್ನು ಸರ್ಕಾರಗಳು ನೀಡುತ್ತವೆ.

ನಮ್ಮ ದೇಶದಲ್ಲಿ ಸರ್ಕಾರಕ್ಕೆ ಇದು ಕೂಡಾ ಅಸಾಧ್ಯ. ಆದ್ದರಿಂದಲೇ ಕಾರ್ಮಿಕ ಸಂಘಗಳು ಉದ್ಯೋಗದ ಹಕ್ಕನ್ನು ಮೂಲಭೂತ ಹಕ್ಕನ್ನಾಗಿ ಮಾಡಲು ಚಳುವಳಿ ನಡೆಸುತ್ತಿವೆ. ಹಾಗೂ ಗಣಕೀಕರಣವನ್ನು ವಿರೋಧಿಸುತ್ತಿವೆ.

ದುಡಿಯುವ ಜನಗಳ ಪ್ರಭುತ್ವದಲ್ಲಿ

ಸಮಾಜವಾದಿ ದೇಶಗಳಲ್ಲಿ ಜವಳಿ ಕೈಗಾರಿಕೆಯಲ್ಲಿ ಸ್ವನಿಯಂತ್ರಿಕರಣದ ಮಟ್ಟ 46 /., ವಿದ್ಯುತ್‌ಶಕ್ತಿ ಕ್ಷೇತ್ರದಲ್ಲಿ 30 /. ಹಾಗೂ ಒಟ್ಟು ರೊಬೊಟ್ (ಸ್ವಯಂಚಾಲಿತ ಯಂತ್ರಮಾನವ) ಗಳ ಸಂಖ್ಯೆ 6000ಕ್ಕೂ ಹೆಚ್ಚು.

ಬಂಡವಾಳಶಾಹೀ ವ್ಯವಸ್ಥೆಯಲ್ಲಿ ಆಧುನಿಕ ತಂತ್ರಜ್ಞಾನ ಜನಸಾಮಾನ್ಯರ ಪರಿಸ್ಥಿತಿಯನ್ನು ಹೆಚ್ಚೆಚ್ಚು ದುರ್ಭರಗೊಳಿಸುವುದನ್ನು ಕಂಡಾಗ ವೈಜ್ಞಾನಿಕ, ತಾಂತ್ರಿಕ ಮುನ್ನಡೆ ಮೂಲಭೂತವಾಗಿ ಮಾನವ-ವಿರೋಧಿ ಎಂಬ ಭಾವನೆ ಉಂಟಾಗುವ ಸಾಧ್ಯತೆಯಿದೆ. ಆದರೆ ವಾಸ್ತವವಾಗಿ ವೈರುದ್ಧ್ಯವಿರುವುದೆಲ್ಲಿ ಎಂಬುದನ್ನು ನೂರು ವರ್ಷಗಳಿಗೂ ಹಿಂದೆ ಕಾರ್ಲ್ ಮಾರ್ಕ್ಸ್ ಹಾಗೂ ಫ್ರೆಡರಿಕ್ ಎಂಗೆಲ್ಸ್ ತೋರಿಸಿಕೊಟ್ಟರು. 1856ರ ಎಪ್ರಿಲ್ 18 ರಂದು ಒಂದು ಸಭೆಯಲ್ಲಿ ಮಾತನಾಡುತ್ತಾ ಮಾರ್ಕ್ಸ್ ಹೇಳಿದ ಈ ನುಡಿಗಳಲ್ಲಿನ ತೀವ್ರತೆಯನ್ನು ಆಳವನ್ನು ನೋಡಿ.

"ಮಾನವ ಶ್ರಮವನ್ನು ಕಡಿಮೆ ಮಾಡುವ ಅದನ್ನು ಫಲಭರಿತಗೊಳಿಸುವ ಆಶ್ಚರ್ಯಕರ ಸಾಮರ್ಥ್ಯ ಪಡೆದ ಯಂತ್ರಗಳು ಅದೇ ಮಾನವ ಶ್ರಮವನ್ನು ಹಸಿವಿನಿಂದ ನರಳಿಸುವುದನ್ನು ವಿಪರೀತವಾಗಿ ದುಡಿಸುವುದನ್ನು ಕಾಣುತ್ತಿದ್ದೇವೆ. ಸಂಪತ್ತಿನ ಹೊಸ ಹೊಸ ಮೂಲಗಳನ್ನು ಒಂದು ವಿಚಿತ್ರ ಅಮಾನುಷ ಮಾಟ ಮಂತ್ರದಿಂದ ಅಭಾವದ ಮೂಲಗಳನ್ನಾಗಿ

(7 ನೇ ಪುಟ ನೋಡಿ)

ಉತ್ಪಾದನಾ ಸಾಧನಗಳ ಆಧುನೀಕರಣ....

(4 ನೇ ಪುಟದಿಂದ)

ಲೋಹದ ಬಿಡಿಭಾಗಗಳನ್ನು ತಯಾರಿಸುವ ಯಂತ್ರಗಳಲ್ಲಿ ಸ್ವನಿಯಂತ್ರೀಕರಣವನ್ನು ಗುರುತಿಸಬೇಕೆಂದರೆ-ಮೊದಲನೆಯ ಹಂತ ಒಂದೇ ರೀತಿಯ ಬಿಡಿ ಭಾಗಗಳನ್ನು ಭಾರಿ ಸಂಖ್ಯೆಯಲ್ಲಿ ತಯಾರಿಸಲೆಂದೇ ರಚಿಸಿರುವ ಯಂತ್ರ. ಈ ಬಿಡಿಭಾಗಗಳ ಗಾತ್ರ ಬದಲಾಯಿಸಲಷ್ಟೇ ಅವಕಾಶವಿರುತ್ತದೆ. ಈ ಹಂತದಲ್ಲಿ ವಿದ್ಯುತ್ ಸ್ವನಿಯಂತ್ರಕಗಳು ಉಪಯೋಗಿಸಲ್ಪಡುತ್ತವೆ. ಮುಂದಿನ ಹಂತ ಕಾಗದದ ಟೇಪುಗಳ ಮೇಲೆ ಮುದ್ರಿಸದೆ ಆದೇಶಗಳನ್ನು ತೆಗೆದುಕೊಂಡು ಯಂತ್ರವನ್ನು ನಿಯಂತ್ರಿಸುವ NC (Numerical Control) ಇದರಿಂದ ಬೇರೆ ಬೇರೆ ರೀತಿಯ ಬಿಡಿ ಭಾಗಗಳನ್ನು ತಯಾರಿಸಬಹುದು. ಕಂಪ್ಯೂಟರ್‌ಗಳನ್ನು ನಿಯಂತ್ರಕಗಳಾಗಿ ಬಳಸಿದಾಗ ಇಂತಹ ಯಂತ್ರಗಳನ್ನು CNC (Computer Numerical Control) ಯಂತ್ರಗಳೆನ್ನುತ್ತಾರೆ. NC ಮತ್ತು CNC ಯಂತ್ರಗಳಿಗೆ ಬಿಡಿ ಭಾಗಗಳನ್ನು ಹೇಗೆ ತಯಾರಿಸಬೇಕೆಂದು ಸೂಚಿಸುವ ಆಜ್ಞೆಗಳನ್ನು ಕೊಟ್ಟ ಮೇಲೆ ಯಂತ್ರ ತನ್ನಷ್ಟಕ್ಕೆ ತಾನೇ ಬಿಡಿ ಭಾಗಗಳನ್ನು ತಯಾರಿಸುವುದು. ಈ ಹಂತದಲ್ಲಿ ಲೋಹದ ಕಚ್ಚಾ ಸರಕು ಇರುವಂತೆ ನೋಡಿಕೊಳ್ಳುವುದು ಮತ್ತು ಬಿಡಿಭಾಗಗಳನ್ನು ಯಂತ್ರದಿಂದ ಹೊರತೆಗೆಯುವುದಕ್ಕೆ ಕಾರ್ಮಿಕನ ಜವಾಬ್ದಾರಿ. ಬಿಡಿ ಭಾಗಗಳನ್ನು ತಯಾರಿಸುವ ಕಾರ್ಯಕ್ರಮ (Programe) ಹೆಚ್ಚಾಗಿ ಇಂಜನೀಯರುಗಳು ನಿರ್ವಹಿಸುತ್ತಾರೆ. ಮುಂದಿನ ಹಂತದಲ್ಲಿ ಸ್ವನಿಯಂತ್ರಿತ ಯಂತ್ರಕ್ಕೆ ಕಚ್ಚಾ ವಸ್ತು ಸರಬರಾಜು ಮಾಡುವ ತಯಾರಾದ ಭಾಗಗಳನ್ನು ಮುಂದಿನ ಯಂತ್ರಕ್ಕೆ ಒಯ್ಯುವ ಕೆಲಸಗಳನ್ನು ಸ್ವನಿಯಂತ್ರಿಕ ರೊಬೋಟ್ (Robot)ಗಳು ವಹಿಸುತ್ತವೆ. ಈ ಕೆಲಸ ನಿರ್ವಹಿಸಲು ರೊಬೋಟ್‌ಗಳಿಗೆ ಕಾರ್ಯಕ್ರಮ (Programe) ಒದಗಿಸಬೇಕಾಗುತ್ತದೆ. ರೊಬೋಟ್‌ಗಳಿಗೆ ಮತ್ತು CNC ಯಂತ್ರಗಳಿಗೆ ಒದಗಿಸುವ ಕಾರ್ಯಕ್ರಮ ಬದಲಾಯಿಸುವುದರಿಂದ ಬೇರೆ ಬೇರೆ ವಸ್ತುಗಳನ್ನು ಅದೇ ಯಂತ್ರಗಳ ಗುಂಪು ತಯಾರಿಸಬಲ್ಲುದು. ಈ ಎಲ್ಲಾ CNC ಯಂತ್ರಗಳನ್ನು ರೊಬೋಟ್, ಮತ್ತಿತರ ಸ್ವನಿಯಂತ್ರಿತ ಯಂತ್ರಗಳನ್ನು ಕೇಂದ್ರೀಯ ಕಂಪ್ಯೂಟರ್ ನಿಯಂತ್ರಿಸಲು (ಮುಖ್ಯವಾಗಿ ಕಾರ್ಯಕ್ರಮವನ್ನು ಸ್ವನಿಯಂತ್ರಿತವಾಗಿ ಒದಗಿಸುವುದು) ತೊಡಗಿದಾಗ ಈ ಹಂತದ ಸ್ವನಿಯಂತ್ರೀಕರಣಕ್ಕೆ Flexible Manufacturing Systems ಅಂದರೆ ಬೇಕಾದ ರೀತಿಯಲ್ಲಿ ಬದಲಿಸಿಕೊಳ್ಳಬಹುದಾದ ಉತ್ಪಾದನಾ ವ್ಯವಸ್ಥೆ ಎನ್ನುತ್ತಾರೆ. ಈ ಹಂತದಲ್ಲಿ ಹೆಚ್ಚು ಕಡಿಮೆ ಕಾರ್ಮಿಕರ ಅಗತ್ಯ ಬೀಳುವುದು ಮೇಲುಸ್ತುವಾರಿಯಲ್ಲಿ ಮಾತ್ರ. ಈ ರೀತಿ ಸ್ವನಿಯಂತ್ರೀಕರಣ ಉತ್ಪಾದನೆಯಲ್ಲಿ ಬಳಸುವ ಬಿಡಿಯಂತ್ರದಿಂದ ಮುಂದುವರಿದು ಒಟ್ಟಾರೆ ಉತ್ಪಾದನಾ ಪ್ರಕ್ರಿಯೆಯ ಸ್ವನಿಯಂತ್ರೀಕರಣದತ್ತ ಮುನ್ನಡೆಯುತ್ತದೆ. ಹೆಚ್ಚು ಕಡಿಮೆ ಇದೇ ರೀತಿಯ ಸ್ವನಿಯಂತ್ರೀಕರಣವನ್ನು ಜವಳಿ ರಾಸಾಯನಿಕ, ಉಕ್ಕಿನ ಕಾರ್ಖಾನೆಗಳಲ್ಲಿ ಕಾಣಬಹುದು. ಇಲ್ಲೂ ಇಲೆಕ್ಟ್ರಿಕಲ್ ಇಲೆಕ್ಟ್ರಾನಿಕ್ಸ್, ಕಂಪ್ಯೂಟರ್ ನಿಯಂತ್ರಣಗಳ ಸೂಕ್ತ ಮಿಶ್ರಣ ಕಾರ್ಮಿಕನ ಸಂಖ್ಯೆಯನ್ನು ಮತ್ತು ಪಾತ್ರವನ್ನು ಅತ್ಯಂತ ಸೀಮಿತಗೊಳಿಸುತ್ತವೆ.

ಈಗಾಗಲೇ ಮುಂದುವರೆದ ಬಂಡವಾಳಶಾಹೀ ದೇಶಗಳಲ್ಲಿ ಸಂಪೂರ್ಣವಾಗಿ ಕಾರ್ಮಿಕರೇ ಇಲ್ಲದ ಕಾರ್ಖಾನೆಗಳನ್ನು ನಡೆಸುವ ತಂತ್ರಜ್ಞಾನ ಲಭ್ಯವಿದ್ದರೂ ಕೂಡಾ ಯಾವ ಭಾಗಗಳನ್ನು ನಿಜವಾಗಿಯೂ ಸ್ವನಿಯಂತ್ರೀಕರಿಸಬೇಕು. ಎಂಬುದು ಬಂಡವಾಳಶಾಹಿ ಮಾಲಿಕರ ಹಿತಾಸಕ್ತಿಯ ದೃಷ್ಟಿಯಿಂದ ನಿರ್ಧಾರಿತವಾಗುತ್ತವೆ. ಕಾರ್ಮಿಕರ ಕೂಲಿಯ ವೆಚ್ಚದಲ್ಲಿ ಒಟ್ಟಾರೆ ಕಡಿತ, ವಿಶಿಷ್ಟ ನಿಪುಣತೆಯಿರುವ ವಿಶಿಷ್ಟ ಪಾತ್ರವಿರುವ ಕಾರ್ಮಿಕರ ಕೆಲಸಗಳ ಸಾಧ್ಯವಾದಷ್ಟು ಮಟ್ಟದ ಸ್ವನಿಯಂತ್ರೀಕರಣ, ಉತ್ಪಾದನಾ ಪ್ರಕ್ರಿಯೆಯ ಮೇಲೆ ಕಾರ್ಮಿಕನ ನಿಯಂತ್ರಣವನ್ನು ಸಾಧ್ಯವಾದಷ್ಟು ಕಡಿಮೆ ಮಾಡುವುದು ಈ ಉದ್ದೇಶಗಳನ್ನು ಪೂರೈಸುವ ನಿಟ್ಟಿನಲ್ಲಿ ಮಾಲಕರು ಪ್ರಯತ್ನಿಸುತ್ತಾರೆ. ಸ್ವನಿಯಂತ್ರೀಕರಣದ ವ್ಯಾಪ್ತಿ, ಹಂತ ಉತ್ಪನ್ನ ವಸ್ತುವಾಗಿರುವ ಬೇಡಿಕೆ, ಉತ್ಪಾದಕರಲ್ಲಿ ಪೈಪೋಟಿ ಇವುಗಳ ಮೇಲೂ ಅವಲಂಬಿತವಾಗಿರುತ್ತದೆ ಇಂಜಿನೀಯರಿಂಗ್ ಕೈಗಾರಿಕೆಗಳು, ಉಕ್ಕು ಮತ್ತು ಜವಳಿ ಕೈಗಾರಿಕೆಗಳಲ್ಲಿ ಸ್ವನಿಯಂತ್ರೀಕರಣಕ್ಕೆ ಯೋಜಿಸಲಾಗಿದೆ.

ಈ ಮೇಲೆ ಹೇಳಿದ ರೀತಿಗಳಲ್ಲದೆ "ಆಧುನೀಕೀರಣ" ಅಂಗವಾಗಿ ಒಂದು ಉತ್ಪಾದನೆಯಲ್ಲಿ ವಿಧಾನದಲ್ಲೇ ಮೂಲಭೂತ ಬದಲಾವಣೆ ಸಹ ಇದೇ ತರಹದ ಪರಿಣಾಮ ಬೀರಬಲ್ಲುದು. ಮುದ್ರಣದಲ್ಲಿ ಮೊಳೆ ಜೋಡಣೆ, ಬಿಸಿ ಲೋಹ ಮೊಳೆ ಜೋಡಣೆ, ಬದಲು ಆಫ್‌ಸೆಟ್, ಕಂಪ್ಯೂಟರ್ ನಿಯಂತ್ರಿತ ಫೋಟೋ ಕಂಪೋಸಿಂಗ್‌ನತ್ತ ಆಗುತ್ತಿರುವ ಬದಲಾವಣೆ ಇದಕ್ಕೊಂದು ಒಳ್ಳೇ ಉದಾಹರಣೆ ದೂರವಾಣಿ ವಿನಿಮಯ ಕೇಂದ್ರಗಳಲ್ಲಿ ಮತ್ತು ಫೋಟೋ ಮುದ್ರಣದಲ್ಲಿ ಬರುತ್ತಿರುವುದು ಸ್ವನಿಯಂತ್ರೀಕರಣ ಸಾರ್ವಜನಿಕ ಸೇವಾ ಕ್ಷೇತ್ರಗಳನ್ನು ಬಿಟ್ಟಿಲ್ಲ ಎಂಬುದಕ್ಕೆ ಉದಾಹರಣೆ.

ಭಾರತದ ಸಂದರ್ಭದಲ್ಲಿ ಯಾಂತ್ರೀಕರಣ, ಕಂಪ್ಯೂಟರೀಕರಣ, ಮತ್ತು ಸ್ವನಿಯಂತ್ರೀಕರಣ ಯೋಜಿಸಿರುವ ರೀತಿಯಿಂದ ಇನ್ನೂ ಹೊಸ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ. ಭಾರತದಲ್ಲಿ ಒಟ್ಟಾರೆ ವಿಜ್ಞಾನ ಮತ್ತು ತಂತ್ರಜ್ಞಾನ ಹಿಂದುಳಿದಿರುವುದರಿಂದ ಕಂಪ್ಯೂಟರ್‌ಗಳಾಗಲಿ, ಸ್ವನಿಯಂತ್ರಿತ ಯಂತ್ರಗಳಾಗಲಿ ಭಾರೀ ಪ್ರಮಾಣದಲ್ಲಿ ಆಮದಾಗುತ್ತವೆ. ನಮ್ಮ ದೇಶದಲ್ಲಿ ತಯಾರಾಗುವ ಯಂತ್ರಗಳಲ್ಲೂ ಆಮದಿನವಾಲ್ಯಾಂಶಬಹಳಷ್ಟಿರುತ್ತದೆ ಹೀಗೆ ಮುಖ್ಯ ವಸ್ತುವಿನ ಉತ್ಪಾದನೆಯಲ್ಲಿ ನಷ್ಟವಾದ ಉದ್ಯೋಗಾವಕಾಶಗಳು ಹೊಸ ಯಂತ್ರಗಳ ಉತ್ಪಾದನೆಯಲ್ಲಿ ಸೃಷ್ಟಿಯಾಗುವ ಹೊಸ ಉದ್ಯೋಗಗಳಲ್ಲಿ ಸ್ವಲ್ಪ ಮಟ್ಟಿಗಾದರೂ ತುಂಬಿಕೊಡುವ ಸಾಧ್ಯತೆ ಕೂಡಾ ನಮ್ಮ ದೇಶದಲ್ಲಿ ಇಲ್ಲ.

○

ಮಂಗಳೂರು

ಮಂಗಳೂರು ಬಂದರ್ ಕೆಲಸಗಾರರ ಸಂಘದ ಮಾಜಿ ಉಪಾಧ್ಯಕ್ಷರಾಗಿದ್ದ ಶ್ರೀ ಬಂಟಪ್ಪ ರೈ ಯವರು ಇದೇ ತಾ. 19-11-86 ನೇ ಸೋಮವಾರ ಸಂಜೆ. ಗಂಟೆ 4ಕ್ಕೆ ನಿಧನರಾಗಿರುತ್ತಾರೆ. ಅನಾರೋಗ್ಯ ನಿಮಿತ್ತ ಒಂದೆರಡು ವರ್ಷದಿಂದ ಬಂದರ ಕೆಲಸಗಾರರ ಸಂಘದಿಂದ ಮತ್ತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯಿಂದ ನಿವೃತ್ತರಾಗಿದ್ದರು.

ಶ್ರೀ ಬಂಟಪ್ಪ ರೈಯವರಿಗೆ ಮಂಗಳೂರು ತಾಲೂಕಿನ ಬೋಳಾರ ಶಾಖೆಯು ತನ್ನ ಶ್ರದ್ಧಾಂಜಲಿಯನರ್ಪಿಸುತ್ತಾ, ದುಃಖ ತಪ್ತ ಅವರ ಕುಟುಂಬ ಹಾಗೂ ಬಂಧುರಗಳ ದುಃಖದಲ್ಲಿ ಭಾಗಿಗಳಾಗಿರುತ್ತೇದೆ.

ಶಾಂತಸಾಗರ ವಲಯದಲ್ಲಿ ಅಶಾಂತಿಗೆ ಸಾಮ್ರಾಜ್ಯಶಾಹಿಗಳ ಯತ್ನ

ಕಳೆದ ಅಕ್ಟೋಬರ್ 31 ರಿಂದ ನವೆಂಬರ್ 2 ರವರೆಗೆ ನಡೆದ ಸಿ. ಪಿ. ಐ. (ಎಂ)ನ ಕೇಂದ್ರ ಸಮಿತಿಯ ಸಭೆ ಕಳೆದ ಮೂರು ತಿಂಗಳ ಅವಧಿಯ ಅಂತರ್ರಾಷ್ಟ್ರೀಯ ಹಾಗೂ ರಾಷ್ಟ್ರೀಯ ವಿದ್ಯಮಾನಗಳನ್ನು ಪರಾಮರ್ಶಿಸಿತು. ಅಂತ ರಾಷ್ಟ್ರೀಯ ಘಟನೆಗಳನ್ನು ಕುರಿತಾದ ಆ ಸಭೆಯ ವಿಮರ್ಶೆಗಳನ್ನು ಇಲ್ಲಿ ನೀಡುತ್ತಿದ್ದೇವೆ.

ಶಾಂತಸಾಗರ ವಲಯದಲ್ಲಿರುವ ಏಶಿಯಾದ ಪ್ರದೇಶಗಳಲ್ಲಿ ನ್ಯಾಟೋ ಮಾದರಿಯ ಸೈನಿಕ ಒಕ್ಕೂಟವೊಂದನ್ನು ರಚಿಸಿ ಆ ಮೂಲಕ ಉದ್ವಿಗ್ನತೆ ಮತ್ತು ಅಶಾಂತಿಯನ್ನು ಸೃಷ್ಟಿಸಲು ಅಮೇರಿಕಾ ಸಂಯುಕ್ತ ಸಂಸ್ಥಾನ, ಜಪಾನ್ ಹಾಗೂ ದ. ಕೊರಿಯಾಗಳು ನಡೆಸುತ್ತಿರುವ ಪ್ರಯತ್ನಗಳ ಕುರಿತು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್ವಾದಿ) ದ ಕೇಂದ್ರ ಸಮಿತಿಯು ವಿಶೇಷ ಆತಂಕ ವ್ಯಕ್ತಪಡಿಸಿದೆ. ಅಮೇರಿಕಾ ಸಂ. ಸಂಸ್ಥಾನ ಜಪಾನಿನಲ್ಲಿ ಮೂವತ್ತೆರಡು ಸೈನಿಕ ನೆಲೆಗಳನ್ನೂ ದ. ಕೊರಿಯಾದಲ್ಲಿ ನಲವತ್ತು ನೆಲೆಗಳನ್ನೂ ಹೊಂದಿದ್ದು ಈ ಪ್ರದೇಶದಲ್ಲಿ ಒಟ್ಟು 3, 60, 000 ಕ್ಕೂ ಮಿಕ್ಕಿದ ಸೈನಿಕರನ್ನು ನೆಲೆಗೊಳಿಸಲಾಗಿದೆ. ಇಂತಹ ಭಾರಿ ಪ್ರಮಾಣದ ಸೈನಿಕರ ಜಮಾವಣೆ ಮತ್ತು ಮಿಲಿಟರಿ ಒಕ್ಕೂಟವೊಂದನ್ನು ರಚಿಸಿ ಅದರೊಳಗೆ ಏಶಿಯಾದ ದೇಶಗಳನ್ನು ಸೆಳೆದುಕೊಳ್ಳುವ ವಾಷಿಂಗ್ಟನ್, ಟೋಕಿಯೊ, ಸಿಯೋಲ್‌ಗಳ ಪಿತೂರಿ ಏಶಿಯಾದ ಶಾಂತಿಗೆ ಭೀಕರ ಅಪಾಯವುಂಟು ಮಾಡುವುದೆಂದು ತಾ 31-10-1986 ರವರೆಗೆ ನಡೆದ ಕೇಂದ್ರ ಸಮಿತಿಯ ಸಭೆಯಲ್ಲಿ ಎಚ್ಚರಿಕೆ ನೀಡಲಾಗಿದೆ.

ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರ ನೀಡಿಕೆ.

ಇತ್ತೀಚಿಗೆ ಅಮೇರಿಕದ ರಕ್ಷಣಾ ಕಾರ್ಯದರ್ಶಿ ಕ್ಯಾಸ್ಪರ್ ವೀನ್‌ಬರ್ಗರ್ ಪಾಕಿಸ್ತಾನಕ್ಕೆ ಸಂದರ್ಶನವಿತ್ತಾಗ ಜಿಯಾ ಆಡಳಿತೆಗೆ ಅವಾಕ್ಸ್ ವಿಮಾನಗಳನ್ನು ನೀಡಲು ಒಪ್ಪಿರುತ್ತಾರೆ. ಇದು ಭಾರತದ ಭದ್ರತೆಗೆ ತೀರಾ ಅಪಾಯಕಾರಿ. ಅಮೇರಿಕಾ ನೀಡಲಿರುವ ಈ ಅತ್ಯಾಧುನಿಕ ಯುದ್ಧ ವಿಮಾನಗಳನ್ನು ಮತ್ತು ಇತರ ಯುದ್ಧ ಸಾಮಗ್ರಿಯನ್ನು ಚಲಾಯಿಸುವವರು ಪಾಕಿಸ್ತಾನಿಗಳಲ್ಲ. ಅಮೇರಿಕದ ಸೈನಿಕರೇ ಅವುಗಳನ್ನು ನಡೆಸುತ್ತಾರೆ. ಅಂದರೆ ಇಲ್ಲಿ ಪಾಕಿಸ್ತಾನವೂ ತನ್ನ ಸಾರ್ವಭೌಮತೆಯನ್ನು ಅಮೇರಿಕಕ್ಕೆ ಒತ್ತೆಯಿಟ್ಟಂತಾಗಿದೆ. ಏಶಿಯಾ ಉಪ ಖಂಡದಲ್ಲಿ ಶಸ್ತ್ರಾಸ್ತ್ರ ಪೈಪೋಟಿಗೆ ದಾರಿ ಮಾಡಿಕೊಡುವ ಅಮೇರಿಕದ ಈ ದುಷ್ಕೃತ್ಯವನ್ನು ಕೇಂದ್ರ ಸಮಿತಿ ತೀವ್ರವಾಗಿ ಖಂಡಿಸಿದೆ.

ರೇಕ್ ಜಾವಿಕ್ ಶೃಂಗ ಸಭೆ

ಶಸ್ತ್ರಾಸ್ತ್ರಗಳಲ್ಲಿ ಪೈಪೋಟಿಯನ್ನು ಕಡಿಮೆಗೊಳಿಸುವ ಒಂದೇ ಉದ್ದೇಶದಿಂದ ಸೋವಿಯತ್ ಒಕ್ಕೂಟ ಕಳೆದ ಎರಡು ವರ್ಷಗಳ ಕಾಲ ಅಣ್ವಸ್ತ್ರ ಸ್ಫೋಟನೆಯ ಮೇಲೆ ತಾನೇ ನಿಷೇಧ ಹೇರಿಕೊಂಡಿತ್ತು. ಇತರ ರಾಷ್ಟ್ರಗಳೂ ಈ ಮೇಲ್ಪಂಕ್ತಿ ಅನುಸರಿಸುವದೆಂದು ಸೋವಿಯತ್ ಒಕ್ಕೂಟ ಆಶಯವೊಂದಿತ್ತು. ಸೋವಿಯತ್ ಒಕ್ಕೂಟ ಕಳೆದ ತಿಂಗಳು ರೇಕ್‌ಜಾವಿಕ್‌ನಲ್ಲಿ ನಡೆದ ಶೃಂಗ ಸಭೆಯಲ್ಲೂ ಶಸ್ತ್ರಾಸ್ತ್ರ ಸಂಗ್ರಹದಲ್ಲಿ ಗಣನೀಯ ಕಡಿತವುಂಟು ಮಾಡುವ ಕೊಡುಗೆ ನೀಡಿದ್ದು ಈ ಹಿನ್ನೆಲೆಯಲ್ಲೇ. ಈ ಯಾವ ಪ್ರಸ್ತಾಪಗಳಿಗೂ ಮಾನ್ಯತೆ ನೀಡದ ಯುದ್ಧಕೋರ ರೀಗನ್ ತನ್ನ ತಾರಾ ಸಮರ ಯೋಜನೆಯನ್ನು ಕೈ ಬಿಡಲು ಸುತರಾಂ ಒಪ್ಪಲಿಲ್ಲ. ರೇಕ್‌ಜಾವಿಕ್ ಶೃಂಗ ಸಭೆ ಹೀಗೆ ವಿಫಲವಾದದ್ದು ವಿಶ್ವಶಾಂತಿಯ ದೃಷ್ಟಿಯಿಂದ ತೀರಾ ಆಘಾತಕರ. ಇದು ಇನ್ನಷ್ಟು ಶಸ್ತ್ರಾಸ್ತ್ರ ಪೈಪೋಟಿಗೆ ಅವಕಾಶ ಮಾಡಿಕೊಡುವ ಅಪಾಯ ಇದೆ. ಅಮೇರಿಕನ್ ಸಾಮ್ರಾ

ಅಂತರ್ರಾಷ್ಟ್ರೀಯ

ಜ್ಯಶಾಹಿಗಳ ಈ ಬೇಜವಾಬ್ದಾರಿತನದ ವರ್ತನೆಯ ಕುರಿತು ಸಿ.ಪಿ.ಐ. (ಎಂ) ನ ಕೇಂದ್ರ ಸಮಿತಿ ತನ್ನ ಅಸಹ್ಯ ವ್ಯಕ್ತಪಡಿಸಿದೆ. ಅಮೇರಿಕದ ಆಡಳಿತೆಯ ಎಲ್ಲ ನಿಯಂತ್ರಣ ಅಲ್ಲಿನ ಮಿಲಿಟರಿ ಕೈಗಾರಿಕೆಯ ಹದ್ದುಗಳ ಕೈಯಲ್ಲಿರುವುದೇ ಈ ವೈಫಲ್ಯಕ್ಕೆ ಕಾರಣವೆಂದು ಕೇಂದ್ರ ಸಮಿತಿ ಭಾವಿಸುತ್ತದೆ, ರೇಕ್‌ಜಾವಿಕ್ ಸಭೆ ವಿಫಲವಾದರೂ ವಿಶ್ವದ ಶಾಂತಿಪ್ರಿಯ ಜನನತೆಯ ಹೋರಾಟ ಕುಂಗಿಲ್ಲ. ಸೋವಿಯತ್ ಒಕ್ಕೂಟ ಮತ್ತು ಇತರ ಸಮಾಜವಾದಿ ರಾಷ್ಟ್ರಗಳು ಹಾಗೂ ಶಾಂತಿಪ್ರಿಯ ರಾಷ್ಟ್ರಗಳ ಬೆಂಬಲದಿಂದ ವಿಶ್ವಶಾಂತಿ ಚಳುವಳಿ ಇನ್ನಷ್ಟು ಬಲಗೊಳ್ಳಲಿದೆ. ರೇಕ್‌ಜಾವಿಕ್ ಶೃಂಗ ಸಭೆಯ ವೈಫಲ್ಯ ಈ ಶಾಂತಿ ಸಮರಕ್ಕೆ ಇನ್ನೂ ಹೆಚ್ಚಿನ ಉತ್ತೇಜನ ನೀಡಲಿದೆಯೆಂದೂ ಕೇಂದ್ರ ಸಮಿತಿ ಅಭಿಪ್ರಾಯ ಪಟ್ಟಿದೆ.

ಗೋರ್ಬಚೇವ್ ಭಾರತ ಸಂದರ್ಶನ.

ಇಂತಹ ಸಂದರ್ಭದಲ್ಲಿ ಸೋವಿಯತ್ ಕಮ್ಯೂನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಮಿಖಾಯಿಲ್ ಗೋರ್ಬಚೇವ್ ಅವರು ಭಾರತಕ್ಕೆ ಸಂದರ್ಶನ ನೀಡಲಿರುವುದು ಮಹತ್ವಪೂರ್ಣ. ಭಾರತದಲ್ಲಿ ಅಸ್ಥಿರತೆಯುಂಟು ಮಾಡಲು ಸಾಮ್ರಾಜ್ಯಶಾಹಿಗಳು ನಡೆಸುತ್ತಿರುವ ಪ್ರಯತ್ನಗಳನ್ನು ಪರಿಣಾಮಕಾರಿಯಾಗಿ ಎದುರಿಸುವಲ್ಲಿ ಗೋರ್ಬಚೇವ್ ಅವರ ಆಗಮನ ಭಾರತಕ್ಕೆ ಹೆಚ್ಚಿನ ಬಲನೀಡಬಲ್ಲುದು. ಭಾರತ ಸೋವಿಯತ್ ಸಂಬಂಧಗಳು ಇನ್ನಷ್ಟು ದೃಢವಾಗಿ ಬೆಳೆಯಲು ಇದರಿಂದ ಸಾಧ್ಯ.

ಏಶಿಯಾ ಮತ್ತು ಶಾಂತಸಾಗರ ವಲಯದಲ್ಲಿ ಶಾಂತಿ ಭಂಗಕ್ಕೆ ಹವಣಿಸುತ್ತಿರುವ ಸಾಮ್ರಾಜ್ಯ ಶಾಹಿಗಳು ಮತ್ತು ಅವರ ಕೈಗೊಂಬೆಗಳ ಕೂಟದ ವಿರುದ್ಧ ಸೋವಿಯತ್ ಒಕ್ಕೂಟವು ಸೂಕ್ತ ಪ್ರತಿಕ್ರಮಗಳನ್ನು ಕೈಗೊಳ್ಳುವುದೆಂದು ಕಳೆದ ಜುಲೈ 26 ರಂದು ಕಾ. ಗೋರ್ಬಚೇವ್ ವ್ಲಾಡಿವಾಸ್ತಕ್‌ನಲ್ಲಿ ಪ್ರಸ್ತಾಪಿಸಿರುವುದು ಅತ್ಯಂತ ಸ್ವಾಗತಾರ್ಹ. ಏಶಿಯಾ-ಪ್ಯಾಸಿಫಿಕ್ ದೇಶಗಳ ಕಮ್ಯುನಿಸ್ಟ್ ಪಕ್ಷಗಳ ಕಾರ್ಯಕಾರಿ ತಂಡಗಳು ಈ ಬಗ್ಗೆ ಇತ್ತೀಚಿಗೆ ಮಾಸ್ಕೊದಲ್ಲಿ ಸಭೆ ಸೇರಿ ಕೈಗೊಂಡಿರುವ ಕ್ರಮಗಳಬಗೆಗೂ ಸಿ.ಪಿ.ಐ (ಎಂ) ಕೇಂದ್ರ ಸಮಿತಿ ಹರ್ಷ ವ್ಯಕ್ತಪಡಿಸಿದೆ.

ಅಲಿಪ್ತ ಶೃಂಗ ಸಭೆ

ಜಿಂಬಾಬ್ವೆಯ ರಾಜಧಾನಿ ಹರಾರೆಯಲ್ಲಿ ನಡೆದ ಅಲಿಪ್ತ ರಾಷ್ಟ್ರಗಳ ಶೃಂಗ ಸಭೆ ಈ ಅವಧಿಯ ಮಹತ್ವಪೂರ್ಣ ಘಟನೆಗಳಲ್ಲಿ ಒಂದು. ಅಮೇರಿಕ ಸಂ. ಸಂಸ್ಥಾನವೂ ತೃತೀಯ ಜಗತ್ತಿನ ರಾಷ್ಟ್ರಗಳಿಂದ ಪ್ರತ್ಯೇಕಗೊಂಡಿರುವುದು ಈ ಸಮ್ಮೇಳನದಲ್ಲಿ ಸ್ಫುಟವಾಗಿ ಗೋಚರಿಸಿದೆ. ದ. ಆಫ್ರಿಕಾದ ವರ್ಣದ್ವೇಷ ನೀತಿಗಿದಿರಾಗಿ ಆ ರಾಷ್ಟ್ರದ ಮೇಲೆ ಎಲ್ಲ ಬಗೆಯ ದಿಗ್ಬಂಧ ಹೇರಬೇಕೆಂದು ನೀಡಿರುವ ಕರೆ ಈ ಶೃಂಗ ಸಭೆಯ ಬಹು ದೊಡ್ಡ ಸಾಧನೆ. ಜಗತ್ತಿನ ಎಲ್ಲೆಡೆ ವರ್ಣದ್ವೇಷ ನೀತಿಯ ವಿರುದ್ಧ ನಡೆಸಲಾಗುತ್ತಿರುವ ಹೋರಾಟಕ್ಕೆ ಹರಾರೆ ಶೃಂಗ ಸಭೆಯ ನಿರ್ಧಾರದಿಂದ ಹೆಚ್ಚಿನ ಬಲದೊರೆತಿದೆ.

ಅಕ್ಟೋಬರ್ ಕ್ರಾಂತಿಯ 69 ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಕೇಂದ್ರ ಸಮಿತಿ ಸೋವಿಯತ್ ಒಕ್ಕೂಟ, ಸೋವಿಯತ್ ಕಮ್ಯುನಿಸ್ಟ್ ಪಕ್ಷ ಮತ್ತು ಜನತೆಗೆ ತನ್ನ ಕ್ರಾಂತಿಕಾರಿ ಅಭಿನಂದನೆಗಳನ್ನು ಸಲ್ಲಿಸಿದೆ.

ಇತ್ತೀಚಿಗೆ ನಿಧನರಾದ ಸಿ.ಪಿ.ಐ. (ಎಂ) ನ ಕೇಂದ್ರ ಸಮಿತಿಯ ಸದಸ್ಯ ಕಾ. ಶಾಂತಿಮಯ ಘೋಷ್, ಮೊಜಾಂಬಿಕ್‌ನ ಅಧ್ಯಕ್ಷ ಸಮೋರಾ ಮಚೆಲ್ ಮತ್ತು ಚೀನೀ ಮುಂದಾಳು ಮಾರ್ಷಲ್ ಯೆ ಜಿಯಾಂಯಿಂಗ್ ಅವರಿಗೂ ಕೇಂದ್ರ ಸಮಿತಿ ಶ್ರದ್ಧಾಂಜಲಿ ಅರ್ಪಿಸಿದೆ.

ದುಡಿಯುವ ಜನಗಳ ಪ್ರಭುತ್ವದಲ್ಲಿ

(5 ನೇ ಪುಟದಿಂದ)

ಪರಿವರ್ತಿಸಲಾಗಿದೆ. ಕಲೆಯ ಜಯಭೇರಿಗಳು ಚಾರಿತ್ರ್ಯವನ್ನು ಕಳೆಕೊಂಡು ಶ್ರಮಕ್ಕೆ ಪಡಕೊಂಡ ವಿಜಯಗಳೇನೋ ಅನ್ನಿಸುತ್ತಿದೆ. ಯಾವ ವೇಗದಲ್ಲಿ ಮನುಷ್ಯ ಪ್ರಕೃತಿಯನ್ನು ತನ್ನ ಅಡಿಯಾಳಾಗಿಸುತ್ತಿದ್ದಾನೋ ಅದೇ ವೇಗದಲ್ಲಿ ಆತ ಬೇರೆ ಮಾನವನಿಗೆ, ತನ್ನದೇ ನೀಚತನಕ್ಕೆ ಗುಲಾಮನಾಗುತ್ತಿದಾನೆ. ವಿಜ್ಞಾನದ ಶುದ್ಧ ಬೆಳಕು ಕೂಡಾ ಅಜ್ಞಾನದ ಕರಾಳ ಹಿನ್ನೆಲೆಯಲ್ಲಿ ಜಿಟ್ಟಿರಿ ಬೇರೆ ಬ್ಲೂ ಪ್ರಜ್ವಲಿಸಲು ಅಸಮರ್ಥವಾಗಿದೆಯೇನೊ ಎಂದೆನಿಸುತ್ತದೆ. ಘನೀಭಾಜ್ಞ ಸಂಶೋಧನೆಗಳು ಭೌತಿಕ ಶಕ್ತಿಗಳಿಗೆ ಬೌದ್ಧಿಕ ಜೀವವನ್ನು ತುಂಬಿಸುತ್ತಿವೆ ಮತ್ತು ಮಾನವ ಜೀವನವನ್ನು ಅಸಂಬದ್ಧ ಗೊಳಿಸುತ್ತಿವೆ. ಆಧುನಿಕ ಉದ್ಯಮ ಮತ್ತು ವಿಜ್ಞಾನ ಒಂದೆಡೆ, ಆಧುನಿಕ ದಾರಿದ್ರ್ಯ ಮತ್ತು ಅಳಿವು ಇನ್ನೊಂದೆಡೆ ಇವೆರಡರ ನಡುವಿನ ವೈರಾಗ್ಯ ನಮ್ಮ ಯುಗದ ಸಾಮಾಜಿಕ ಸಂಬಂಧಗಳಲ್ಲಿನ ವೈರಾಗ್ಯ ಕಣ್ಣಿಗೆ ರಾಚುವ, ಮೂರು ಅಲ್ಲಗಳೆಯಲಾರದ ಒಂದು ವಾಸ್ತವಾಂಶ.

ಈ ಮಾತು ಎಷ್ಟು ಸತ್ಯ ಎನ್ನುವುದನ್ನು ಸಮಾಜವಾದೀ ದೇಶಗಳಲ್ಲಿ ಆಧುನಿಕ ತಂತ್ರಜ್ಞಾನದ ಬಳಕೆ ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ಬಳಕೆಯಾಗುತ್ತಿರುವ ರೀತಿ ತೋರಿಸಿಕೊಟ್ಟಿದೆ. ಉತ್ಪಾದನಾ ಶಕ್ತಿಗಳು ಹಾಗೂ ಉತ್ಪಾದನಾ ಸಂಬಂಧಗಳಲ್ಲಿನ ವೈರುದ್ಯವನ್ನು ಪರಿಹರಿಸಿದ ಸಮಾಜವಾದೀ ದೇಶಗಳ ದುಡಿಯುವ ಜನಗಳಿಗೆ ಆಧುನಿಕ ತಂತ್ರಜ್ಞಾನ ನಮ್ಮಂತೆ ಶಾಪವಾಗಿಲ್ಲ, ಮಾನವೇತಿಹಾಸ ಹಿಂದೆಂದೂ ಕಾಣದ ವರವಾಗಿದೆ. ಅದ್ದರಿಂದಲೇ "ಸಮಗ್ರ ಸ್ವನಿಯಂತ್ರೀಕರಣ" ಸಾಧಿಸಲು ಸೋವಿಯತ್ ಕಮ್ಯುನಿಸ್ಟ್ ಪಕ್ಷದ 27 ನೇ ಅಧಿವೇಶನ ಕರೆ ನೀಡಿದೆ. ಸಮಾಜವಾದೀ ದೇಶಗಳ ಪರಸ್ಪರ ಆರ್ಥಿಕ ಸಹಕಾರ ಸಂಘಟನೆ (ಸಿ. ಎಮ್. ಇ ಎ) ತಂತ್ರಜ್ಞಾನದ ಬೆಳವಣಿಗೆ ಮತ್ತು ತೀವ್ರಗೊಳಿಸಲು ಕ್ರಿ. ಶ. 2000 ದವರೆಗೆ ಹಾಕಿಕೊಂಡ 5 ಮುಖ್ಯ ಕಾರ್ಯಗಳಲ್ಲಿ ಕೂಡಾ "ಸಮಗ್ರ ಸ್ವನಿಯಂತ್ರೀಕರಣ" ಒಂದು.

ಈಗಾಗಲೇ ಸಮಾಜವಾದೀ ದೇಶಗಳಲ್ಲೂ ಮುಂದುವರೆದ ಬಂಡವಾಳಶಾಹೀ ದೇಶಗಳಷ್ಟೇ ಮಟ್ಟದಲ್ಲಿ ತಾಂತ್ರಿಕ ಬೆಳವಣಿಗೆಗಳನ್ನು ಉತ್ಪಾದನಾ ವಿಧಾನದಲ್ಲಿ ಅಳವಡಿಸಲಾಗಿದೆ. ಅದರೆ ಯಾವುದೇ ಸಾಮಾಜಿಕವಾಗಿ ಅಹಿತಕಾರಿಯಾದ ಪರಿಣಾಮ ಕಂಡು ಬಂದಿಲ್ಲ. ಏಕೆ ? ಅದೇ ಸಾಮಾಜಿಕ ವ್ಯವಸ್ಥೆಯಲ್ಲಿನ ಮೂಲಭೂತವ್ಯತ್ಯಾಸ ಪೂರ್ಣ ಉದ್ಯೋಗದ ಭರವಸೆ, ತಾಂತ್ರಿಕ ಬೆಳವಣಿಗೆಗಳ ಪ್ರಯೋಜನದ ಸಮಾನ ಹಂಚಿಕೆ ಹಾಗೂ ಸಾಮಾಜಿಕವಾಗಿ ಯೋಜಿತವಾಗಿರುವ ಕೈಗಾರಿಕಾ ಬೆಳವಣಿಗೆ. ಈ ವ್ಯವಸ್ಥೆಯಲ್ಲಿ ವಿಜ್ಞಾನ, ತಂತ್ರಜ್ಞಾನ ಸಮಸ್ತ ಮಾನವ ಸಮಾಜಕ್ಕಾಗಿ. ಕೆಲವೇ ಜನರ ಲಾಭದ ದಾಹ ಹೆಚ್ಚಿಸಲಿಕ್ಕಾ ಅಲ್ಲ.

ಅಪಾಯಕಾರೀ, ಆಯಾಸಕಾರಿ ಹಾಗೂ ಮಾನವ ಯೋಗ್ಯವಲ್ಲದ ಕೆಲಸಗಳನ್ನು ಕಂಪ್ಯೂಟರ್‌ಗಳಿಗೆ ಒಪ್ಪಿಸಿ ಮಾನವನ ಸೃಜನಾತ್ಮಕ ಶಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ಹೊಸ ವೈಜ್ಞಾನಿಕ ಪರಿಶೋಧನೆಗಳನ್ನೂ ಅಲ್ಲಿ ನಡೆಸಲಾಗುತ್ತಿದೆ. ಹೊಸ ತಂತ್ರಜ್ಞಾನದಿಂದ ಜನರಿಲ್ಲಿ ಕೆಲಸ ಕಳೆದುಕೊಳ್ಳುವುದಿಲ್ಲ. ಸಮಾಜದ ವೆಚ್ಚದಲ್ಲಿ ಹೊಸ ನಿಪುಣತೆಗಳನ್ನು ಕಲಿಯುತ್ತಾರೆ. ಹೆಚ್ಚು ಸೃಜನಾತ್ಮಕ ಚಟುವಟಿಕೆಗಳಲ್ಲಿ ತೊಡಗಲು ಅವಕಾಶವಾಗುತ್ತದೆ ಸಾಂಸ್ಕೃತಿಕ ಚಟುವಟಿಕೆಗಳಿಗೆ ಹೆಚ್ಚೆಚ್ಚು ವಿರಾಮ ದೊರೆಯುತ್ತಿದೆ ಅದ್ದರಿಂದ ವಿಜ್ಞಾನ ಮತ್ತು ತಂತ್ರಜ್ಞಾನ "ಪರಕೀಯ ಶಕ್ತಿ"ಯಾಗಿ ಮಾನವನನ್ನು ಪೀಡಿಸುವುದಿಲ್ಲ. ○

ಕಾರ್ಮಿಕರ ಸಮಸ್ಯೆಗೆ ಮುಕ್ತಿಯಿಲ್ಲ

(1 ನೇ ಪುಟದಿಂದ)

ಶೋಷಣೆ ಕೊನೆಗೊಳ್ಳಬೇಕಾದರೆ ಕಾರ್ಮಿಕ ವರ್ಗದ ನೇತೃತ್ವದಲ್ಲಿ ಕ್ರಾಂತಿಯಾಗಿ ಸಮಾಜವಾದ ಬರಬೇಕು, ಅದೇನೆಂಬುದನ್ನು ತಿಳಿದುಕೊಳ್ಳಬೇಕು. ಅದಕ್ಕಾಗಿ ಹೋರಾಡಬೇಕೆಂದು ಕರೆಯಿತ್ತವರು ಕಾ. ಸಿ. ಕಣ್ಣನ್ ಕೇರಳ ಸಿ.ಐ.ಟಿ.ಯು ಪ್ರಧಾನ ಕಾರ್ಯದರ್ಶಿಯವರು, ಅವರು ಬಿ. ನಾರಾಯಣ ನಗರದಲ್ಲಿ(ಮಂಗಳೂರು) ಮೂರು ದಿವಸ ನಡೆದ ಕರ್ನಾಟಕ ರಾಜ್ಯದ ಐದನೇ ಬೀಡಿ ಕಾರ್ಮಿಕರ ಸಮ್ಮೇಳನವನ್ನು ಉದ್ಘಾಟಿಸಿ ಭಾಷಣ ಮಾಡುತ್ತಿದ್ದರು.

60 ವರ್ಷಗಳ ಹಿಂದೆ ಬೀಡಿ ಕಾರ್ಮಿಕರನ್ನು ಸಂಘಟಿಸಿದ ಹಿನ್ನೆಲೆ ಕರ್ನಾಟಕಕ್ಕಿದೆ. ದೇಶದ ಶೋಷಣೆ ವ್ಯವಸ್ಥೆಯ ಹಿನ್ನೆಲೆಯಲ್ಲಿ ಕಾರ್ಮಿಕ ಸಂಘಟನೆ ಪ್ರಾರಂಭವಾಗಿತ್ತು. ಆಗ ಬರೇ ಬೀಡಿ ಕಾರ್ಮಿಕರ ಸಮಸ್ಯೆಗಳ ಕುರಿತಷ್ಟೇ ಅಲ್ಲ ಸಮತಾವಾದದ ಕುರಿತೂ ಪ್ರಚಾರ ಮಾಡಿದ್ದರು. ಸಮಾಜವಾದದ ಕುರಿತು ಪ್ರಚಾರ ಇಲ್ಲದಿದ್ದಾಗ, ಅದರ ಕುರಿತು ಅಪಪ್ರಚಾರ ಇದ್ದಾಗ ಬೀಡಿ ಕಾರ್ಮಿಕರು ಆ ಪ್ರಜ್ಞೆ ಉಂಟುಮಾಡಿರುವುದು ಅಭಿನಂದನೀಯ.

ರಾಷ್ಟ್ರೀಯ ಚಳುವಳಿಯಲ್ಲಿ ವರ್ಗ ಜಾಗೃತಿ ಉಂಟುಮಾಡುವಾಗ ಕಾಂಗ್ರೆಸ್ಸಿನವರು ಅದರಲ್ಲಿ ಪಾಲ್ಗೊಳ್ಳಲು ಬಿಡುತ್ತಿರಲಿಲ್ಲ. ಆದರೆ ನಾವು ಅದನ್ನು ಮಾಡಿದ್ದೇವೆ. ಮನುಷ್ಯ ಮನುಷ್ಯನ ಸುಲಿಗೆ ನಿಲ್ಲಬೇಕೆಂದು ಮಾರ್ಕ್ಸ್ ಹೇಳಿದ್ದರು. ಕಾರ್ಮಿಕ ವರ್ಗದ ಜೀವನದಲ್ಲಿ ಪರಿವರ್ತನೆ ಆಗ ಬೇಕೆಂದೂ ಅವರು ಹೇಳಿದ್ದರು. ಕಾರ್ಮಿಕ ವರ್ಗದ ಶೋಷಣೆ ಕೊನೆಗೊಳ್ಳಬೇಕಾದರೆ, ಕಾರ್ಮಿಕ ವರ್ಗದ ನೇತೃತ್ವದಲ್ಲಿ ಹೊಸ ಸಮಾಜ ನಿರ್ಮಾಣವಾಗಬೇಕೆಂದೂ ಮಾರ್ಕ್ಸ್ ಹೇಳಿರುವುದನ್ನು ಕಾ. ಕಣ್ಣನ್ ಅವರು ನೆನಪಿಸಿ ಕೊಟ್ಟು, ಆ ಸಿದ್ಧಾಂತಕ್ಕನುಸರಿಸಿ ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಕರ್ನಾಟಕದ ಹಲವು ಭಾಗಗಳಲ್ಲಿ ಕಾರ್ಮಿಕರು ಹೋರಾಟ ಮಾಡಿದ್ದನ್ನು ಪ್ರಶಂಸಿಸಿ ಆ ಹೋರಾಟದ ಧ್ಯೇಯ ಧೋರಣೆಗಳನ್ನು ಮುಂದಿಟ್ಟುಕೊಂಡೇ ಬೀಡಿ ಕಾರ್ಮಿಕರ ಪ್ರಶ್ನೆಗಳಾದ ಲಾಗ್ ಪುಸ್ತಕ, ವೇತನ, ಎವರೇಜ್, ತುಟ್ಟಿ ಭತ್ತೆ, ಕಂಟ್ರ್ಯಾಕ್ಟರುಗಳ ಸುಲಿಗೆಗಳ ವಿರುದ್ಧ ಹೋರಾಡುತ್ತಿರುವಾಗಲೇ ವರ್ಗ ಪ್ರಜ್ಞೆಯನ್ನುಂಟು ಮಾಡಿ ಕ್ರಾಂತಿ ಮಾಡಿರೆಂದು ಗಂಭೀರವಾಗಿಯೇ ಕರೆ ಕೊಟ್ಟರು ಕಾ. ಕಣ್ಣನ್.

ಆವೆ ವೇಗಬಿಟ್ಟುಬಿಡಿ

ಈ ರೀತಿ ವರ್ಗ ಪ್ರಜ್ಞೆಯ ಇತಿಹಾಸ ಇದ್ದೂ ಕೂಡ ಈಗ ಕರ್ನಾಟಕದ ಬೀಡಿ ಕಾರ್ಮಿಕರ ಸಂಘಟನೆ ಹೋರಾಟ ಆವೆ ವೇಗದಲ್ಲಿ ನಡೆದಿದೆ. ಹಿಂದೆ ಕೇರಳದಲ್ಲಿ 5 ಆವೆ ಕೂಲಿ ಸಿಗುತ್ತಿದ್ದಾಗ ಕರ್ನಾಟಕದಲ್ಲಿ 10 ಆವೆ ಸಿಗುತ್ತಿತ್ತು. ಈಗ ಕೇರಳದಲ್ಲಿ ರೂ. 20 ಸಿಗುವಾಗ ಕರ್ನಾಟಕದಲ್ಲಿ ಬರೇ ರೂ. 12 ಸಿಗುತ್ತಿದೆ.

ಕೇರಳದಲ್ಲಿ ಕಾರ್ಮಿಕರು ವರ್ಗ ಪ್ರಜ್ಞೆಯಿಂದ ಹೋರಾಡಿದ್ದಾರೆ. ಇಲ್ಲಿ ಅದರ ಅಭಾವ ಕಂಡುಬರುತ್ತಿದೆ. ಆದ್ದರಿಂದ ಕರ್ನಾಟಕದ ಬೀಡಿ ಕಾರ್ಮಿಕರು ತಮ್ಮ ಆವೆ ವೇಗ ಬಿಟ್ಟು ಕೊಟ್ಟು ದೀರ್ಘ ಹೋರಾಟಕ್ಕೆ ಮುಂದಾಗಬೇಕೆಂದು ಕರೆನೀಡಿದರು.

ವರ್ಗಪ್ರಜ್ಞೆ ಅಗತ್ಯ

ಶೋಷಣೆ ರಹಿತ ಸಮಾಜ ನಿರ್ಮಿಸುವುದೇ ಕಾರ್ಮಿಕ ವರ್ಗದ ಗುರಿಯಾಗಿರಬೇಕು ವರ್ಗ ಹೋರಾಟದ ಅತಿ ಹರಿತವಾದ ಅಸ್ತ್ರ ಅದಾಗಿರಬೇಕು. ವರ್ಗ ಹೋರಾಟದ ತಳಹದಿಯಲ್ಲಿ ಸಂಘಟನೆ ಬೆಳೆಸಲಿಕ್ಕೆ ಸಾಧ್ಯವಾದರೆ ಮಾತ್ರ ಅದನ್ನು ಸಮಾಜ ನಿರ್ಮಾಣದ ಅಸ್ತ್ರವನ್ನಾಗಿ ಉಪಯೋಗಿಸಲು ಸಾಧ್ಯವೆಂದೂ, ಸಂಘಟಿತ ವರ್ಗದಲ್ಲಿ ಮಾತ್ರ ಅಂಥ ಪ್ರಜ್ಞೆ ಬಂದಿರುವುದರಿಂದ ಅವರಿಂದಲೇ ಕ್ರಾಂತಿ ಸಾಧ್ಯವೆಂದೂ ಹೇಳಿದರು.


ಕರ್ನಾಟಕದಲ್ಲಿಯ 6 ಲಕ್ಷ ಬೀಡಿ ಕಾರ್ಮಿಕರಲ್ಲಿ ಹೆಚ್ಚಿನವರು ಅಸಂಘಟಿತರು. ವರ್ಗಪ್ರಜ್ಞೆ ಇಲ್ಲದವರು. ಆದ್ದರಿಂದ ಸಂಘಟಿತ ಕಾರ್ಮಿಕರು ಅವರಲ್ಲಿ ವರ್ಗ ಪ್ರಜ್ಞೆ ಉಂಟು ಮಾಡಿ ಹೋರಾಟಕ್ಕೆ ಅಣಿಗೊಳಿಸಬೇಕೆಂದು ಹೇಳಿ, ಈಗ ಕಾರ್ಖಾನೆಗಳು ಹೋಗಿ ಮನೆಯಲ್ಲೇ ಬೀಡಿ ಉತ್ಪಾದನೆ ಆಗುತ್ತಿರುವುದರಿಂದ ಸುಲಿಗೆ ಹೆಚ್ಚಾಗಿದೆ ಎಂದೂ, ನಿರುದ್ಯೋಗ ಸಮಸ್ಯೆಯಿಂದಾಗಿಯೇ ಬೀಡಿ ಕಾರ್ಮಿಕರ ಪರಿಸ್ಥಿತಿ ಹದಗೆಟ್ಟಿದೆಂದೂ, ಬಂಡವಾಳಶಾಹಿ ವ್ಯವಸ್ಥೆಯು ಅಂಗವಾಗಿ ಇದು ಇರುವುದರಿಂದ ಅಂಥ ವ್ಯವಸ್ಥೆಯನ್ನೇ ಕಿತ್ತೊಗೆಯಲು, ಶ್ರಮವಹಿಸಬೇಕೆಂದೂ ಹೇಳಿದರು.

ಕೇರಳದ 400 ಕಾರ್ಖಾನೆಗಳಲ್ಲಿ 40 ಸಾವಿರ ಬೀಡಿ ಕಾರ್ಮಿಕರು ದುಡಿಯುತ್ತಿದ್ದಾರೆ. ಕರ್ನಾಟಕದಲ್ಲಿ ಮನೆಯೇ ಕಾರ್ಖಾನೆಯಾಗಿದೆ. ಆದ್ದರಿಂದಲೇ ಅವರ ಸುಲಿಗೆ ನಡೆಯುತ್ತಿದೆಂದರು.

ಕೇರಳದಲ್ಲಿ 6 ದಿವಸ ಕೆಲಸಕ್ಕೆ 7 ದಿವಸದ ಸಂಬಳ ಸಿಗುತ್ತಿದೆ. ರಜೆ ಸಂಬಳ, ಸಂಬಳ ಸಹಿತ ಹೆರಿಗೆ ರಜೆ, ಗ್ರಾಚ್ಯುಟಿ, ಬೋನಸ್ ಸಿಗುತ್ತಿದೆ. ಕರ್ನಾಟಕದಲ್ಲಿ ಆವಾವುದು ಸಿಗುತ್ತಿಲ್ಲ ಕೇರಳದಲ್ಲಿ ಕಾರ್ಮಿಕರೇ ನಡೆಸುತ್ತಿರುವ ದಿನೇಶ್ ಬೀಡಿಯವರಿಗೆ ಪ್ರತಿ ವರ್ಷ ರೂ. 3 ಕೋಟಿ ಲಾಭ ಸಿಗುತ್ತಿದೆ. ಕಾರ್ಮಿಕರಿಗೆ ಎಲ್ಲ ಸೌಲಭ್ಯ ಒದಗಿಸುತ್ತಿದ್ದಾರೆ. ಮಂಗಳೂರಿನ ಗಣೇಶ್ ಬೀಡಿಯವರಿಗೆ ರೂ 13 ಕೋಟಿ ಲಾಭ. ಆದರೆ ಅಲ್ಲಿ ದುಡಿಯುವ ಕಾರ್ಮಿಕರಿಗೆ ಸವಲತ್ತುಗಳಿಲ್ಲ. ಕೇರಳದಲ್ಲಿ ಹೋರಾಟದ ಮೂಲಕ ಕಾರ್ಮಿಕರು ಎಲ್ಲ ಸೌಕರ್ಯ ಪಡೆದಿದ್ದಾರೆ. ಕರ್ನಾಟಕದಲ್ಲಿಯೂ ಸಂಘಟನೆ ಬಲಿಷ್ಟಗೊಳಿಸಿ ಹೋರಾಟ ನಡೆಯಲೆಂದು ಹಾರೈಸಿದರು ಸಿ. ಕಣ್ಣನ್.

ರಾಜ್ಯ ಬೀಡಿ ಫೆಡರೇಶನಿನ ಅಧ್ಯಕ್ಷರಾದ ಎಸ್. ಸೂರ್ಯ ನಾರಾಯಣ ರಾವ್ ಅಧ್ಯಕ್ಷತೆ ವಹಿಸಿದ್ದರು. ಪ್ರಾರಂಭದಲ್ಲಿ ದ. ಕ. ಜಿಲ್ಲಾ ಬೀಡಿ ಕಾರ್ಮಿಕ ಸಂಘಟನೆಯ ಕಾರ್ಯದರ್ಶಿ ಯು. ಬಿ. ಲೋಕಯ್ಯನವರು ಸ್ವಾಗತಿಸಿದರು. ಸ್ವಾಗತ ಸಮಿತಿ ಅಧ್ಯಕ್ಷ ಕೆ. ಶಂಕರ ಅವರು ಅತಿಥಿಗಳನ್ನು ಪರಿಚಯಿಸಿದರು. ಪ್ರಾಂತ ರೈತ ಸಂಘದ ಕಾರ್ಯದರ್ಶಿ ಪಿ. ರಾಮ ಚಂದ್ರ ರಾವ್ ಅವರಿಂದ ಧ್ವಜಾರೋಹಣವಾಯಿತು.

ದ. ಕ. ಜಿಲ್ಲೆ, ಮೈಸೂರು, ಬೆಂಗಳೂರು, ಕೋಲಾರ, ತುಮಕೂರು, ಶಿವಮೊಗ್ಗ, ಬಳ್ಳಾರಿ, ಚಿತ್ರದುರ್ಗ, ಧಾರವಾಡ ಜಿಲ್ಲೆಗಳಿಂದ 270 ರಷ್ಟು ಪ್ರತಿನಿಧಿಗಳು ಬಂದಿದ್ದರು. ಅದರಲ್ಲಿ ಅರ್ಧದಷ್ಟು ಮಹಿಳೆಯರು.



ವರದಿ ಮಂಡನೆ-ಚರ್ಚೆ

ಬೀಡಿ ಫೆಡರೇಶನಿನ 1ನೇ ಕಾರ್ಯದರ್ಶಿ ಮಹಮ್ಮದ ದಸ್ತಗೀರ ಅವರು ಕರಡು ವರದಿಯನ್ನು ಮಂಡಿಸಿದರು 30 ಕ್ಕೂ ಹೆಚ್ಚು ಪ್ರತಿನಿಧಿಗಳು ಚರ್ಚೆಯಲ್ಲಿ ಭಾಗವಹಿಸಿ ತಮ್ಮ ಪ್ರದೇಶದ ಹೋರಾಟಗಳನ್ನು ವಿವರಿಸಿ ವರದಿಯನ್ನು ಶ್ರೀಮಂತಗೊಳಿಸಿದರು. ವರದಿಯ ಮೇಲೆ ಚರ್ಚೆ ಮಾಡುತ್ತಾ ಘೋಷಾ ಪದ್ಧತಿ ವಿರುದ್ಧ, ಶರೀಯತ್ ವಿರುದ್ಧ ಮೂಢ ನಂಬಿಕೆಗಳ ವಿರುದ್ಧ ಹೋರಾಡಬೇಕೆಂದು ಮುಸ್ಲಿಂ ಮಹಿಳಾ ಪ್ರತಿನಿಧಿಗಳು ವಾದಿಸಿದರು.

ಐದನೆಯ ಸಮ್ಮೇಳನ ನಡೆಯುತ್ತಿದ್ದರೂ ಪ್ರಾರಂಭದಿಂದಲೂ ರಾಜ್ಯದ ಬೀಡಿ ಸಂಘಟನೆಗೆ ಒಂದು ಸಂವಿಧಾನ ಇಲ್ಲದ ಕಾರಣ ಸಂಘಟನೆಯನ್ನು ಶಿಸ್ತು ಬದ್ಧವಾಗಿ ಕಟ್ಟಿ ವಿಸ್ತರಿಸಲು ಸಾಧ್ಯವಾಗಿಲ್ಲ. ಆ ಕೊರತೆಯನ್ನು ನೀಗಿಸಲು ಕರ್ನಾಟಕ ರಾಜ್ಯ ಬೀಡಿ ಕಾರ್ಮಿಕರ ಒಕ್ಕೂಟದ ಹೆಸರಿನಲ್ಲಿ ಒಂದು ಸಂವಿಧಾನವನ್ನು ಸ್ವೀಕರಿಸಲಾಯಿತು.

ಕರ್ನಾಟಕದ 6 ಲಕ್ಷ ಅಸಂಘಟಿತ ಕಾರ್ಮಿಕರನ್ನು ಸಂಘಟಿಸಿ, ಕೇರಳದಲ್ಲಿಯಂತೆ ಹೆಚ್ಚಿನ ಸವಲತ್ತುಗಳನ್ನು ಪಡೆಯಲು, ಜನತಾ ಪ್ರಜಾಪ್ರಭುತ್ವ ಕ್ರಾಂತಿಯತ್ತ ಮುಂದೆ ಸಾಗಲು ಮಂಗಳೂರಿನಲ್ಲಿ ಮುಕ್ತಾಯಗೊಂಡ ಐದನೇ ಸಮ್ಮೇಳನ ಸ್ಫೂರ್ತಿ ನೀಡುವುದರಲ್ಲಿ ಸಂಶಯವಿಲ್ಲ. ಮುಂದೆ ಜಿಗಿದು ಸಂಘಟನೆ ಬಲಿಷ್ಟಗೊಳಿಸುತ್ತೇವೆಂಬ ಆತ್ಮ ವಿಶ್ವಾಸದಿಂದ ಪ್ರತಿನಿಧಿಗಳು ಹಿಂತಿರುಗಿದರೆಂದರೆ ಅತಿಶಯೋಕ್ತಿಯಾಗಲಾರದು.

ಎಸ್. ಎಫ್. ಐ. ರಾಜ್ಯ ಸಮಾವೇಶ

1986 ಡಿಸೆಂಬರ್ 11ರಿಂದ 15ರ ವರೆಗೆ ಆಂಧ್ರ ಪ್ರದೇಶದ ವಿಜಯವಾಡದಲ್ಲಿ ಜರುಗುವ ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್.ಎಫ್.ಐ.) 6ನೇ ಅಖಿಲ ಭಾರತ ಸಮ್ಮೇಳನಕ್ಕೆ ಪೂರ್ವಭಾವಿಯಾಗಿ ಡಿಸೆಂಬರ್ 7 ರಂದು ಮಂಗಳೂರಿನಲ್ಲಿ ರಾಜ್ಯ ಸಮಾವೇಶವು ನಡೆಯುತ್ತದೆ. ಸಮಾವೇಶವು ಬೋಳಾರದಲ್ಲಿರುವ ಸೌತ್ ಕೆನರಾ ಟೈಲ್ಸ್ ವರ್ಕರ್ಸ್ ಯೂನಿಯನ್ ಬಿಲ್ಡಿಂಗ್‌ನಲ್ಲಿ ನಡೆಯಲಿದ್ದು ಎಸ್. ಎಫ್. ಐ. ಅಖಿಲ ಭಾರತ ಅಧ್ಯಕ್ಷರಾದ ಕಾ॥ ಸೀತಾರಾಮಯೆಚೂರಿಯವರು ಸಹ ಸಮಾವೇಶದಲ್ಲಿ ಭಾಗವಹಿಸಿ ಮಾರ್ಗದರ್ಶನ ನೀಡುವರು.

ಬೆಳಗ್ಗೆ 6-30ಕ್ಕೆ ಧ್ವಜಾರೋಹಣದೊಂದಿಗೆ ಉದ್ಘಾಟನಾ ಸಮಾರಂಭವು ಪ್ರಾರಂಭವಾಗುತ್ತದೆ. ಪ್ರತಿನಿಧಿಗಳು 6ನೇ ತಾರೀಕು ಸಂಜೆ 7 ಗಂಟೆಯೊಳಗಾಗಿ ಸಮಾವೇಶದ ಸ್ಥಳವನ್ನು ತಲುಪಬೇಕು.

Printed & Published by P. Ramachandra Rao on behalf of the Communist Party of India [Marxist] Karnataka State Committe, K. V. Temple Street, Sultanpet, Bangalore-560053 Editorial and manageriel office: L-56, K. V. Temple Street, Sultanpet B-53 Phone : 75331 Editor P. Ramachandra Rao Managing Editor : N. K. Upadhyaya